ಸಂಪಾದಕರು :
ಎಂ.ಎಸ್. ವಿಕಾಸ್

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಶುಕ್ರವಾರ, ಅಕ್ಟೋಬರ್ 04, 2024

ಸಂಪುಟ : 51 ಸಂಚಿಕೆ : 142 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com




ನಗರ ದೇವತೆ ದುಗ್ಗಮ್ಮ





## ದೇವನಗರಿಯಲ್ಲಿ ನವರಾತ್ರಿ ಉತ್ಸವಕ್ಕೆ ವಿಧ್ಯುಕ್ತ ಚಾಲನೆ

ದಾವಣಗೆರೆ, ಅ.3- ಇಂದಿನಿಂದ 9 ದಿನಗಳ ಕಾಲ ನಡೆಯಲಿರುವ ನವರಾತ್ರಿ ಮಹೋತ್ಸವಕ್ಕೆ ನಗರದಲ್ಲಿ ವಿಧ್ಯುಕ್ತವಾಗಿ ಚಾಲನೆ ನೀಡಲಾಯಿತು.

ನಗರ ದೇವತೆ ಶ್ರೀ ದುರ್ಗಾಂಭಿಕಾ ದೇವಿ ದೇವಸ್ಥಾನದಲ್ಲಿ ಶಾಸಕ ಡಾ.ಶಾಮನೂರು ಶಿವಶಂಕರಪ್ಪ ಹಾಗೂ ಕುಟುಂಬದವರು ದೀಪ ಬೆಳಗಿಸುವ ಮೂಲಕ ದಸರಾ ಉತ್ಸವಕ್ಕೆ ಚಾಲನೆ ನೀಡಿದರು.

ಜಿಲ್ಲಾ ಉಸ್ತುವಾರಿ ಸಚಿವ ಶಾಮನೂರು ಮಲ್ಲಿಕಾರ್ಜುನ್, ಸಂಸದೆ ಡಾ.ಪ್ರಭಾ ಮಲ್ಲಿಕಾರ್ಜುನ್, ಕೈಗಾರಿಕೋದ್ಯಮಿ ಎಸ್. ಎಸ್. ಗಣೇಶ್ ಸೇರಿದಂತೆ ಕುಟುಂಬದ ಸದಸ್ಯರು, ದೇವಸ್ಥಾನ ಟ್ರಸ್ಟ್ ಧರ್ಮದರ್ಶಿಗಳು ಮತ್ತು ಇತರರು ಈ ಸಂದರ್ಭದಲ್ಲಿದ್ದರು.

ವಿಶ್ವ ಹಿಂದೂ ಪರಿಷದ್ ಹಾಗೂ ಸಾರ್ವಜನಿಕ ವಿಜಯದಶಮಿ ಮಹೋತ್ಸವ ಸಮಿತಿಯಿಂದ ಪಿ.ಬಿ. ರಸ್ತೆಯ ಬೀರಲಿಂಗೇಶ್ವರ ದೇವಸ್ಥಾನದ ಆವರಣದಲ್ಲಿ ಶ್ರೀ ದುರ್ಗಾ ದೇವಿಯ ವಿಗ್ರಹ, ಘಟ ಸ್ಥಾಪನೆ ನೆರವೇರಿತು.

ನಗರದಲ್ಲಿರುವ ಶಕ್ತಿ ದೇವತೆಯರ ದೇವಾಲಯಗಳು ವಿಶೇಷ ಪೂಜೆಗಳು ನಡೆದವು. ವಿವಿದ ಬಗೆಯಲ್ಲಿ ದೇವತಾ ಮೂರ್ತಿಗಳನ್ನು ಅಲಂಕರಿಸಲಾಗಿತ್ತು. ಸಾರ್ವಜನಿಕರು ದೇವಾಲಯಗಳಿಗೆ ತೆರಳಿ ದೇವರ ದರ್ಶನ ಪಡೆದರು.

# ಬಿಜೆಪಿಯಲ್ಲಿದ್ದುಕೊಂಡೇ ಸಿದ್ದರಾಮಯ್ಯ ಬಚಾವ್

**ಶಾಸಕ ಯತ್ನಾಳ್, ರಮೇಶ್ ಜಾರಕಿಹೊಳಿ, ಬಿ.ಪಿ.ಹರೀಶ್, ಜಿ.ಎಂ.ಸಿದ್ದೇಶ್ವರ ವಿರುದ್ಧ ವಿಜಯೇಂದ್ರ ಪರ ಬಣ ಅಸಮಾಧಾನ**

ಬೆಂಗಳೂರು ಅ. 3 - ಪಕ್ಷದಲ್ಲಿದ್ದುಕೊಂಡೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಬಚಾವ್ ಮಾಡಲು ಹೊರಟಿರುವ ತಂಡವನ್ನು ಹೊರಹಾಕಿ ಎಂಬ ಕೂಗು ರಾಜ್ಯ ಬಿಜೆಪಿಯಲ್ಲಿ ಎದ್ದಿದೆ.

ಕೇಂದ್ರದ ಮಾಜಿ ಸಚಿವ ಹಾಗೂ ಹಾಲಿ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್, ಶಾಸಕರಾದ ರಮೇಶ್ ಜಾರಕಿಹೊಳಿ, ಬಿ.ಪಿ.ಹರೀಶ್, ಮಾಜಿ ಸಂಸದ ಜಿ.ಎಂ.ಸಿದ್ದೇಶ್ವರ ಅವರುಗಳ ವಿರುದ್ಧ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಪರ ಬಣ ತಿರುಗಿಬಿದ್ದಿದೆ.

ಪಕ್ಷದ ಹಿರಿಯ ನಾಯಕ ಹಾಗೂ ಮಾಜಿ ಸಚಿವ ಕಟ್ಟಾಸುಬ್ರಹ್ಮಣ್ಯ ನಾಯ್ಡು ಅವರ ನಿವಾಸದಲ್ಲಿ ಸಭೆ ಸೇರಿದ್ದ ಈ ಬಣ, ಪಕ್ಷ ವಿರೋಧಿ ಚಟುವಟಿಕೆಯಲ್ಲಿ ತೊಡಗಿರುವವರ ಮೇಲೆ ಕ್ರಮ ಕೈಗೊಳ್ಳಿ ಎಂದು ವರಿಷ್ಠರನ್ನು ಒತ್ತಾಯಿಸಿದೆ.

ವರಿಷ್ಠರಿಂದ ನೇಮಿಸಲ್ಪಟ್ಟ ರಾಜ್ಯಾಧ್ಯಕ್ಷ ರನ್ನು ಪ್ರಶ್ನಿಸುವುದೆಂದರೆ ವರಿಷ್ಠರನ್ನೇ ಪ್ರಶ್ನಿಸಿ ದಂತೆ. ಹಿರಿಯರಾದ ಬಸನಗೌಡ ಪಾಟೀಲ್ ಯತ್ನಾಳ್, ನಮ್ಮ ರಾಜ್ಯಾಧ್ಯಕ್ಷ ವಿಜಯೇಂದ್ರರ ಬಗ್ಗೆ ಪ್ರಸ್ತಾಪ ಮಾಡುತ್ತಾರೆ. ಅನಗತ್ಯವಾಗಿ ಚರ್ಚೆಗಳನ್ನು ಮಾಡುತ್ತಿದ್ದಾರೆ, ಅವರಿಗೆ ಅನುಭವ ಇಲ್ಲ, ಚಿಕ್ಕವರು ಎಂದೆಲ್ಲ ಮಾತನಾಡುತ್ತಾರೆ.

ರಾಜ್ಯಾಧ್ಯಕ್ಷರಿಗೆ ಮಾನಸಿಕ ಕಿರಿಕಿರಿ ಉಂಟು ಮಾಡುವ ಉದ್ದೇಶ ಯತ್ನಾಳ್ ಅವರದು. ಇದು ಎಷ್ಟರ ಮಟ್ಟಿಗೆ ಸರಿ? ಹಿಂದೆ ಎ.ಕೆ.ಸುಬ್ಬಯ್ಯ ಅವರು 42 ರಿಂದ 44 ವರ್ಷದವರಿದ್ದಾಗ ಪಕ್ಷದ ಅಧ್ಯಕ್ಷರಾಗಿದ್ದರು. ಯಡಿಯೂರಪ್ಪ ಅಧ್ಯಕ್ಷರಾದಾಗ ಅವರಿಗೆ 48 ವರ್ಷ, ಈಗ ವಿಜಯೇಂದ್ರರಿಗೆ 49ರಿಂದ 50 ವರ್ಷ. ಇವರು ಹೇಗೆ ಕಿರಿಯರಾಗುತ್ತಾರೆ? **(4ನೇ ಪುಟಕ್ಕೆ)**

## ಹೆಚ್ಡಿಕೆ ವಿರುದ್ಧ ಹಣ ಬೆದರಿಕೆ ಆರೋಪ : ಎಫ್.ಐ.ಆರ್



ಬೆಂಗಳೂರು, ಅ. 3 - ಕೇಂದ್ರ ಸಚಿವ ಹೆಚ್. ಡಿ. ಕುಮಾರಸ್ವಾಮಿ ವಿರುದ್ಧ ಹಣ ವಸೂಲಿ ಹಾಗೂ ಅಪರಾಧಿಕ ಬೆದರಿಕೆ ಆರೋಪದ ಮೇಲೆ ಎಫ್ಐಆರ್ ದಾಖಲಿಸಲಾಗಿದೆ.

ರಿಯಲ್ ಎಸ್ಟೇಟ್ ಉದ್ಯಮಿ ವಿಜಯ್ ಟಾಟಾ ಎಂಬುವವರು ನೀಡಿದ ದೂರು ಆಧರಿಸಿ ಮಾಜಿ ಪರಿಷತ್ ಸದಸ್ಯ ರಮೇಶ್ ಗೌಡ ವಿರುದ್ಧವೂ ಎಫ್ಐಆರ್ ದಾಖಲಿಸಲಾಗಿದೆ.

ಕಳೆದ ಆಗಸ್ಟ್ 24ರಂದು ಗೌಡ ತಮ್ಮ ಮನೆಗೆ ಬಂದು ಹಣಕ್ಕಾಗಿ ಬೆದರಿಕೆ ಹಾಕಿದ್ದರು. ಕುಮಾರಸ್ವಾಮಿ ದೂರವಾಣಿ ಮೂಲಕ ಬೆದರಿಕೆ ಹಾಕಿದ್ದರು. ಚನ್ನಪಟ್ಟಣ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ತಮ್ಮ ಮಗ ನಿಖಿಲ್ ಕುಮಾರಸ್ವಾಮಿ ಸ್ಪರ್ಧಿಸುತ್ತಿದ್ದು, ಇದಕ್ಕಾಗಿ 50 ಕೋಟಿ ರೂ. ನೀಡುವಂತೆ ಕುಮಾರಸ್ವಾಮಿ ಬೆದರಿಕೆ ಹಾಕಿದ್ದರು ಎಂದು ಟಾಟಾ ದೂರಿದ್ದರು.

## ರೈಲ್ವೆ ಉದ್ಯೋಗಿಗಳಿಗೆ ಬೋನಸ್ ಪ್ರಕಟ

ನವದೆಹಲಿ, ಅ. 3 - ರೈಲ್ವೆ ಉದ್ಯೋಗಿಗಳಿಗೆ 78 ದಿನಗಳ ಉತ್ಪಾದನೆ ಆಧಾರಿತ ಬೋನಸ್ ನೀಡಲು ಕೇಂದ್ರ ಸಂಪುಟ ಸಭೆಯಲ್ಲಿ ನಿರ್ಧರಿಸಲಾಗಿದೆ. ಇದರಿಂದಾಗಿ 11.72 ಲಕ್ಷ ಉದ್ಯೋಗಿಗಳು 2,028.57 ಕೋಟಿ ರೂ.ಗಳ ಬೋನಸ್ ಪಡೆಯಲಿದ್ದಾರೆ

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ನಡೆದ ಸಂಪುಟ ಸಭೆಯಲ್ಲಿ ಬೋನಸ್ ಕುರಿತು ನಿರ್ಧಾರ ತೆಗೆದುಕೊಳ್ಳಲಾಗಿದೆ. ಪ್ರತಿ ವರ್ಷ ದಸರಾ ಮುನ್ನಾ ದಿನಗಳಲ್ಲಿ ಬೋನಸ್ ಘೋಷಣೆ ಮಾಡಲಾಗುತ್ತದೆ.

## ಕೃಷಿ ಯೋಜನೆಗಳು ವಿಲೀನ 1 ಲಕ್ಷ ಕೋಟಿ ರೂ. ಅನುದಾನ

ನವದೆಹಲಿ, ಅ. 3 - ಕೃಷಿ ವಲಯದ ಹಲವಾರು ಯೋಜನೆಗಳನ್ನು ವಿಲೀನಗೊಳಿಸುವ ಪ್ರಸ್ತಾವನೆಗೆ ಕೇಂದ್ರ ಸರ್ಕಾರ ಒಪ್ಪಿಗೆ ನೀಡಿದೆ. ಪಿಎಂ ರಾಷ್ಟ್ರೀಯ ಕೃಷಿ ವಿಕಾಸ್ ಯೋಜನೆ ಹಾಗೂ ಕೃಷಿ ಉನ್ನತಿ ಯೋಜನೆ ಎಂಬ ಯೋಜನೆಗಳ ವ್ಯಾಪ್ತಿಗೆ ಹಲವು ಕೃಷಿ ಯೋಜನೆಗಳು ಬರಲಿವೆ. ಇದಕ್ಕಾಗಿ ಕೇಂದ್ರ ಸರ್ಕಾರ 1 ಲಕ್ಷ ಕೋಟಿ ರೂ. ವೆಚ್ಚ ಮಾಡಲಿದೆ.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ನಡೆದ ಸಂಪುಟ ಸಭೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ಸರ್ಕಾರದ ನಿರ್ಧಾರ ಸುಸ್ಥಿರ ಕೃಷಿ ಹಾಗೂ ಆಹಾರ ಸುರಕ್ಷತೆಗೆ ನೆರವಾಗುವ ನಿರೀಕ್ಷೆ ಇದೆ.

ಕೇಂದ್ರ ಕೃಷಿ ಇಲಾಖೆಯ ಎಲ್ಲಾ ಕೇಂದ್ರ ಸರ್ಕಾರ ಪ್ರಾಯೋಜಿತ ಯೋಜನೆಗಳನ್ನು ಪ್ರಸ್ತಾಪಿತ ಎರಡೂ ಯೋಜನೆಗಳ ವ್ಯಾಪ್ತಿಗೆ ತರಲಾಗುವುದು ಎಂದು ಅಧಿಕೃತ ಹೇಳಿಕೆಯಲ್ಲಿ **(4ನೇ ಪುಟಕ್ಕೆ)**

## ಐದು ಭಾಷೆಗಳಿಗೆ ಶಾಸ್ತ್ರೀಯ ಸ್ಥಾನಮಾನ

ನವದೆಹಲಿ, ಅ. 3 – ಮರಾಠಿ, ಪಾಲಿ, ಪ್ರಾಕೃತ, ಅಸ್ಸಾಮಿ ಹಾಗೂ ಬಂಗಾಳಿ ಭಾಷೆಗಳನ್ನು ಶಾಸ್ತ್ರೀಯ ಭಾಷೆಗಳೆಂದು ಪರಿಗಣಿಸುವ ಪ್ರಸ್ತಾಪಕ್ಕೆ ಕೇಂದ್ರ ಸಂಪುಟ ಒಪ್ಪಿಗೆ ನೀಡಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ನಡೆದ ಸಂಪುಟ ಸಭೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. 2004ರಲ್ಲಿ ಕೇಂದ್ರ ಸರ್ಕಾರ ಶಾಸ್ತ್ರೀಯ ಭಾಷೆ ಎಂಬ ಹೊಸ ವಿಭಾಗವನ್ನು ಆರಂಭಿಸಿತ್ತು. ಮೊದಲು ತಮಿಳು ಈ ಸ್ಥಾನ ಪಡೆದುಕೊಂಡಿತ್ತು. ನಂತರ ಸಂಸ್ಕೃತ, ತೆಲುಗು, ಕನ್ನಡ, ಮಲಯಾಳಂ ಹಾಗೂ ಒಡಿಯ ಭಾಷೆಗಳು ಶಾಸ್ತ್ರೀಯ ಭಾಷೆಗಳು ಎಂಬ ಸ್ಥಾನ ಪಡೆದಿದ್ದವು.

## ಡಾ. ತಿಪ್ಪೇಸ್ವಾಮಿ ಎ.ಪಿ. ನಿಧನ



ದಾವಣಗೆರೆ ಎಸ್.ಎಸ್. ಬಡಾವಣೆ, ಕುಂದುವಾಡ ಕೆರೆ ರಸ್ತೆ ವಾಸಿ, ಜ.ಜ.ಮು. ವೈದ್ಯಕೀಯ ಮಹಾವಿದ್ಯಾಲಯದ ನಿವೃತ್ತ ಹಿರಿಯ ಪ್ರಾಧ್ಯಾಪಕರಾಗಿದ್ದ **ಡಾ. ತಿಪ್ಪೇಸ್ವಾಮಿ ಎ.ಪಿ.** ಅವರು ದಿನಾಂಕ 03-10-2024 ರ ಗುರುವಾರ ಬೆಳಗ್ಗೆ 7 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 74 ವರ್ಷ ವಯಸ್ಸಾಗಿತ್ತು.

ಧರ್ಮಪತ್ನಿ – ವಕೀಲರಾದ ಶ್ರೀಮತಿ ಕೆ.ಬಿ. ಶೈಲಾಶ್ರೀ ತಿಪ್ಪೇಸ್ವಾಮಿ, ಪುತ್ರ – ಬೆಂಗಳೂರಿನ ವೈದೇಹಿ ವೈದ್ಯಕೀಯ ಮಹಾವಿದ್ಯಾಲಯದ ಡಾ. ಎ.ಟಿ. ಅನಿರುದ್ಧ್, ಸೊಸೆ ಡಾ. ಜಿ.ಆರ್. ರಶ್ಮಿ ಮತ್ತು ಅಪಾರ ಬಂಧು-ಬಳಗವನ್ನು ಅವರು ಅಗಲಿದ್ದಾರೆ.

ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 03.10.2024 ರ ಗುರುವಾರ ಸಂಜೆ ಪಿ. ಬಿ. ರಸ್ತೆಯ ವೈಕುಂಠಧಾಮದಲ್ಲಿ ನೆರವೇರಿಸಲಾಯಿತು.

– ದುಃಖತಪ್ತ ಕುಟುಂಬ ವರ್ಗ




# ಪುರಸಭೆ ಸ್ಥಾ.ಸ. ಗೆ ಮಂಜುನಾಥ್ ಅಧ್ಯಕ್ಷ



**ಮಲೇಬೆನ್ನೂರು**

ಮಲೇಬೆನ್ನೂರು, ಅ. 3- ಇಲ್ಲಿನ ಪುರಸಭೆ ಸ್ಥಾಯಿ ಸಮಿತಿಯ ನೂತನ ಅಧ್ಯಕ್ಷರಾಗಿ 18ನೇ ವಾರ್ಡ್ ಸದಸ್ಯ ಬಿ. ಮಂಜುನಾಥ್ ಅವರು ಗುರುವಾರ ನಡೆದ ಸ್ಥಾಯಿ ಸಮಿತಿ ಸದಸ್ಯರ ಸಭೆಯಲ್ಲಿ ಅವಿರೋಧವಾಗಿ ಆಯ್ಕೆಯಾದರು.

ಪುರಸಭೆ ಅಧ್ಯಕ್ಷೆ ಶ್ರೀಮತಿ ನಸ್ರೀಯಾ ಬಾನು ಚಮನ್ ಷಾ, ಪುರಸಭೆ ಮುಖ್ಯಾಧಿಕಾರಿ ಭಜಕ್ಕನವರ್, ಸ್ಥಾಯಿ ಸಮಿತಿ ನೂತನ ಸದಸ್ಯರಾದ ಕೆ.ಜಿ.ಲೋಕೇಶ್, ಗೌಡ್ರ ಮಂಜಣ್ಣ, ನಯಾಜ್, ದಾದಾಪೀರ್, ಭೋವಿ ಶಿವು ಅವರುಗಳು ನೂತನ ಅಧ್ಯಕ್ಷರನ್ನು ಅಭಿನಂದಿಸಿ, ಮಾತನಾಡಿದರು.

ಸ್ಥಾಯಿ ಸಮಿತಿಯ ನೂತನ ಅಧ್ಯಕ್ಷ ಬಿ. ಮಂಜುನಾಥ್ ಮಾತನಾಡಿ, ನನ್ನನ್ನು ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿದ ಎಲ್ಲಾ ಸದಸ್ಯರಿಗೆ ಮತ್ತು ಕಾಂಗ್ರೆಸ್ ಮುಖಂಡರಾದ ನಂದಿಗಾವಿ ಶ್ರೀನಿವಾಸ್, ಬಿ.ಎಂ. ವಾಗೀಶ್‌ಸ್ವಾಮಿ ಅವರಿಗೆ ಆಭಾರಿಯಾಗಿದ್ದೇನೆ. ಪುರಸಭೆಯ ನೂತನ ಕಛೇರಿ ಸಂಕೀರ್ಣ ನಿರ್ಮಾಣಕ್ಕಾಗಿ ನೀರಾವರಿ ಇಲಾಖೆ ಆವರಣದಲ್ಲಿ ಜಾಗ ನೀಡುವ ವಿಚಾರ ಹಾಗೂ ಪುರಸಭೆಗೆ ವಿಶೇಷ ಅನುದಾನ ನೀಡುವಂತೆ ಒತ್ತಾಯಿಸಲು ಶೀಘ್ರ ಬೆಂಗಳೂರಿಗೆ ನಿಯೋಗ ಹೋಗುವುದಾಗಿ ಮಂಜುನಾಥ್ ತಿಳಿಸಿದರು.

ಸ್ಥಾಯಿ ಸಮಿತಿ ಸದಸ್ಯರಾದ ಖಲೀಲ್, ಶಬ್ಬೀರ್ ಖಾನ್, ಕಛೇರಿ ವ್ಯವಸ್ಥಾಪಕರಾದ ಶ್ರೀಮತಿ ಜಯಲಕ್ಷ್ಮಿ, ಆರೋಗ್ಯ ನಿರೀಕ್ಷಕರಾದ ನವೀನ್, ಅವಿನಾಶ್ ಈ ವೇಳೆ ಹಾಜರಿದ್ದರು.

ಸಭೆಯ ನಂತರ ಸ್ಥಾಯಿ ಸಮಿತಿ ನೂತನ ಅಧ್ಯಕ್ಷರನ್ನು ಪುರಸಭೆ ಸದಸ್ಯರಾದ ಸಾಬೀರ್ ಅಲಿ, ಎ. ಆರೀಫ್ ಅಲಿ, ಷಾ ಅಬ್ರಾರ್, ಬಸವರಾಜ್ ದೊಡ್ಮನಿ, ಎಕ್ಕೆಗೊಂದಿ ಕರಿಯಪ್ಪ, ಮಾಜಿ ಸದಸ್ಯರಾದ ಭಾನುವಳ್ಳಿ ಸುರೇಶ್, ಸುಬ್ಬಿ ರಾಜಣ್ಣ, ಪಿ.ಆರ್. ರಾಜು, ಎ.ಕೆ. ಲೋಕೇಶ್, ಮುಖಂಡರಾದ ಕೆ.ಪಿ. ಗಂಗಾಧರ್, ಎಂ.ಬಿ. ರುಸ್ತುಂ, ಚಮನ್ ಷಾ, ಬಿ. ಚಂದ್ರಪ್ಪ, ಪಿ.ಆರ್. ಕುಮಾರ್, ಯೂನೂಸ್, ಪಿ.ಹೆಚ್. ಶಿವಕುಮಾರ್, ಕಡ್ಲೆಗೊಂದಿ ಕೇಶವ, ಎ.ಕೆ. ನಾಗರಾಜ್, ಲಿಂಗರಾಜ್, ಯುವರಾಜ್, ಜಿಗಳೇರ ಮಧು, ಭಾನುವಳ್ಳಿ ಬಸವರಾಜ್, ಮೆಡಿಕಲ್ ಶಾಪ್ ರಾಜೀವ್, ಕುಂಬಳೂರು ಶರಣ್ ಸೇರಿದಂತೆ ಇನ್ನೂ ಅನೇಕರು ಅಭಿನಂದಿಸಿದರು.

# ನಗರದಲ್ಲಿ ಇಂದು-ನಾಳೆ ದೃಶ್ಯಕಲಾ ಮಹಾವಿದ್ಯಾಲಯದ 'ಕಲಾ ಪಯಣ ಅನ್ವೇಷಣೆ ಪಥದಲ್ಲಿ' ಕಾರ್ಯಕ್ರಮ

ದಾವಣಗೆರೆ, ಅ. 3- ವಿಶ್ವವಿದ್ಯಾನಿಲಯ ದೃಶ್ಯ ಕಲಾ ಮಹಾವಿದ್ಯಾಲಯದ 60 ವರ್ಷಗಳ ಕಲಾ ಪಯಣ (1964-2024) ಅನ್ವೇಷಣೆಯ ಪಥದಲ್ಲಿ ಕಾರ್ಯಕ್ರಮ ನಾಳೆ ದಿನಾಂಕ 4 ರಿಂದ 6 ರವರೆಗೆ ಮಹಾವಿದ್ಯಾಲಯದ ಸಭಾಂಗಣದಲ್ಲಿ ನಡೆಯಲಿದೆ ಎಂದು ಮಹಾವಿದ್ಯಾಲಯದ ಬೋಧಕರಾದ ದತ್ತಾತ್ರೇಯ ಎನ್. ಭಟ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ನಾಳೆ ದಿನಾಂಕ 4 ರ ಶುಕ್ರವಾರ ಬೆಳಿಗ್ಗೆ 11 ಗಂಟೆಗೆ ಕಲಾ ಪ್ರದರ್ಶನವನ್ನು ದಾವಣಗೆರೆ ವಿವಿ ಕುಲಪತಿ ಪ್ರೊ. ಬಿ.ಡಿ. ಕುಂಬಾರ್ ಉದ್ಘಾಟಿಸುವರು. ಇದೇ ವೇಳೆ ವರ್ಣ ಚಿತ್ರಗಳ ಸಮೂಹ ಪ್ರದರ್ಶನ ಮತ್ತು ಶ್ರೇಷ್ಠ ಕಲಾ ಪ್ರಶಸ್ತಿಗೆ ಚಾಲನೆ ನೀಡಲಾಗುವುದು ಎಂದರು.

ಕಲಾ ಪ್ರೇಮಿ ದಿ. ಬಿದರೆ ನಾರಾಯಣ ರಾವ್ ಅವರ ಸವಿನೆನಪಿಗಾಗಿ ವಾರ್ಷಿಕ ಕಲಾ ಪ್ರಶಸ್ತಿಯನ್ನು ನೀಡಲಾಗುವುದು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ರವಿಚಂದ್ರ, ಹಿರಿಯ ಕಲಾವಿದ ಎ. ಮಹಾಲಿಂಗಪ್ಪ, ಕರ್ನಾಟಕ ನಾಟಕ ಅಕಾಡೆಮಿ ಸದಸ್ಯೆ ಆಶಾರಾಣಿ ನಡೋಣಿ, ಡಾ. ವಿಠಲರೆಡ್ಡಿ ಎಫ್ ಚುಳಕಿ, ದಾವಣಗೆರೆ ವಿಶ್ವವಿದ್ಯಾನಿಲಯ ದೃಶ್ಯ ಕಲಾ ಮಹಾವಿದ್ಯಾಲಯದ ಪ್ರಾಚಾರ್ಯ ಡಾ. ಜೈರಾಜ್ ಚಿಕ್ಕಪಾಟೀಲ್, ಶ್ರೀನಾಥ್ ಬಿದರೆ ಭಾಗವಹಿಸಲಿದ್ದಾರೆ.

ಮಧ್ಯಾಹ್ನ 12 ಕ್ಕೆ ದಿ. ಬಿದರೆ ನಾರಾಯಣರಾವ್ ಅವರ ಸವಿನೆನಪಿಗಾಗಿ ವಾರ್ಷಿಕ ಪ್ರಶಸ್ತಿ ನೀಡಲಾಗುವುದು. 2.30 ಕ್ಕೆ ಭಾವಚಿತ್ರ ಕಲೆಯ ಪ್ರಾತ್ಯಕ್ಷಿಕೆ ನಡೆಸಲಾಗುವುದು.

ನಾಳೆ ದಿನಾಂಕ 5 ರಂದು ದಿ ಆರ್ಟ್, ಯುಎಕ್ಸ್ ಅಂಡ್ ಡಿಸೈನ್ ಇನ್ ಎಐಎ-ಡ್ರೈವನ್ ಫ್ಯೂಚರ್ ಕುರಿತು ಮಾಹಿತಿ ನೀಡುವರು.

ಪತ್ರಿಕಾಗೋಷ್ಠಿಯಲ್ಲಿ ಡಾ. ಬಾಬುರಾವ್ ನಡೋಣಿ, ಆಶಾರಾಣಿ ನಡೋಣಿ, ಶ್ರೀನಾಥ್ ಬಿದರೆ, ಕುಬೇರಪ್ಪ ಮತ್ತಿತರರು ಉಪಸ್ಥಿತರಿದ್ದರು.

# ಕೇಂದ್ರದಿಂದ ಇಂಟರ್ನ್‌ಶಿಪ್ ಯೋಜನೆ ಜಾರಿ

ನವದೆಹಲಿ, ಅ. 3 - ಐದು ವರ್ಷಗಳಲ್ಲಿ ಒಂದು ಕೋಟಿ ಯುವಕ - ಯುವತಿಯರಿಗೆ ವರ್ಷಕ್ಕೆ 60,000 ರೂ.ಗಳ ಇಂಟರ್ನ್‌ಶಿಪ್ ನೀಡುವ ಯೋಜನೆಯನ್ನು ಕೇಂದ್ರ ಸರ್ಕಾರ ಜಾರಿಗೆ ತಂದಿದೆ.

2024 - 25ರಲ್ಲಿ ಪ್ರಾಯೋಗಿಕವಾಗಿ ಈ ಯೋಜನೆ ಜಾರಿಗೆ ತರಲಾಗುವುದು. ಈ ವರ್ಷ 1.25 ಲಕ್ಷ ಜನರಿಗೆ 800 ಕೋಟಿ ರೂ.ಗಳ ಇಂಟರ್ನ್‌ಶಿಪ್ ನೀಡಲಾಗುವುದು ಎಂದು ಕೇಂದ್ರ ಸರ್ಕಾರದ ಮೂಲಗಳು ತಿಳಿಸಿವೆ.

ಉನ್ನತ ಕಂಪನಿಗಳಲ್ಲಿ ಪ್ರಧಾನ ಮಂತ್ರಿ ಇಂಟರ್ನ್‌ಶಿಪ್ ಯೋಜನೆ ಜಾರಿಗೆ ತರಲಾಗುವುದು ಎಂದು ಈ ಹಿಂದೆ ಬಜೆಟ್‌ನಲ್ಲಿ ತಿಳಿಸಲಾಗಿತ್ತು. ಈ ಯೋಜನೆಯ ಅನ್ವಯ ಇಂಟರ್ನ್‌ಗಳಿಗೆ ವಿಮೆ ಸಹ ನೀಡಲಾಗುವುದು.

ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ ರೂಪಿಸಿರುವ ಪೋರ್ಟಲ್ ಮೂಲಕ ಯೋಜನೆ ಜಾರಿಗೆ ತರಲಾಗುವುದು. 21ರಿಂದ 24 ವರ್ಷಗಳ ಅರ್ಹರು ಈ ಯೋಜನೆಯಲ್ಲಿ ಭಾಗಿಯಾಗಲಿದ್ದಾರೆ. ಡಿಸೆಂಬರ್ 2ರಿಂದ ಇಂಟರ್ನ್‌ಶಿಪ್ ಯೋಜನೆ ಜಾರಿಗೆ ಬರಲಿದೆ.

ಈ ಯೋಜನೆಯ ಅನ್ವಯ 12 ತಿಂಗಳ ಅವಧಿಗೆ ಕಂಪನಿಗಳಲ್ಲಿ ತರಬೇತಿ ನೀಡಲಾಗುವುದು. ಕನಿಷ್ಠ ಆರು ತಿಂಗಳು ಪ್ರಾಯೋಗಿಕ ಕಲಿಕೆಗೆ ಅವಕಾಶ ಇರಲಿದೆ. ಯೋಜನೆಯಲ್ಲಿ ತಿಂಗಳಿಗೆ 5,000 ರೂ. ನೆರವು ನೀಡಲಾಗುವುದು. ಇದರಲ್ಲಿ ಕೇಂದ್ರ ಸರ್ಕಾರ 4,500 ರೂ. ಹಾಗೂ ಕಂಪನಿಗಳು ತಮ್ಮ ಸಿ.ಎಸ್.ಆರ್. ನಿಧಿ ಮೂಲಕ 500 ರೂ. ನೀಡಲಿವೆ. ಕಂಪನಿಗಳು ತರಬೇತಿ ವೆಚ್ಚವನ್ನೂ ಸಹ ಸಿ.ಎಸ್.ಆರ್. ನಿಧಿಯಿಂದ ಭರಿಸಲಿವೆ.

ಪ್ರೌಢಶಾಲೆಯಿಂದ ಹಿಡಿದು ಪದವಿಯವರೆಗೆ ವ್ಯಾಸಂಗ ಮಾಡಿರುವ ಯುವಕ - ಯುವತಿಯರು ಈ ಯೋಜನೆಗೆ ಅರ್ಹತೆ ಪಡೆಯಲಿದ್ದಾರೆ.

# ದೌರ್ಜನ್ಯದಡಿ ಕೊಲೆ: ಅವಲಂಬಿತರಿಗೆ ಸರ್ಕಾರಿ ನೌಕರಿ

## ಜಿಲ್ಲಾ ಜಾಗೃತಿ ಮತ್ತು ಉಸ್ತುವಾರಿ ಸಮಿತಿ ಸಭೆಯಲ್ಲಿ ಜಿಲ್ಲಾಧಿಕಾರಿ ಗಂಗಾಧರ ಸ್ವಾಮಿ

ದಾವಣಗೆರೆ, ಅ.3- ದೌರ್ಜನ್ಯದಡಿ ಕೊಲೆಯಾದ ಕುಟುಂಬದ ಅವಲಂಬಿತರರಿಗೆ ಸರ್ಕಾರಿ ಉದ್ಯೋಗ ಮತ್ತು ಪರಿಹಾರವನ್ನು ನೀಡಲಾಗುತ್ತದೆ ಎಂದು ಜಿಲ್ಲಾಧಿಕಾರಿ ಜಿ. ಎಂ.ಗಂಗಾಧರಸ್ವಾಮಿ ತಿಳಿಸಿದರು.

ಅವರು ಗುರುವಾರ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ನಡೆದ ಜಿಲ್ಲಾ ಜಾಗೃತಿ ಮತ್ತು ಉಸ್ತುವಾರಿ ಸಮಿತಿಯ 3 ನೇ ತ್ರೈಮಾಸಿಕ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಈ ವರ್ಷ ಫೆಬ್ರವರಿ 2 ರಂದು ಜಗಳೂರು ಪೊಲೀಸ್ ಠಾಣಾ ವ್ಯಾಪ್ತಿಯ ಗಾಂಧಿನಗರದ ಡಾಕ್ಯಾನಾಯ್ಕ್ ಬಿನ್ ರಾಮಾನಾಯ್ಕ್ ಮತ್ತು ಏಪ್ರಿಲ್ 4 ರಂದು ಹೊನ್ನಾಳಿಯ ಮಂಜಪ್ಪ ಬಿನ್ ಬಸಪ್ಪ ಹಾಗೂ ಸೆಪ್ಟೆಂಬರ್ 18 ರಂದು ನ್ಯಾಮತಿ ತಾಲ್ಲೂಕಿನ ಮರಿಗೊಂಡನಹಳ್ಳಿ ಶಿವರಾಜ್ ಬಿನ್ ತೀರ್ಥಪ್ಪ ಇವರು ದೌರ್ಜನ್ಯದಡಿ ಕೊಲೆಯಾಗಿದ್ದು, ಸರ್ಕಾರದ ಆದೇಶದಂತೆ ಕುಟುಂಬದವರಿಗೆ ಸರ್ಕಾರಿ ಉದ್ಯೋಗ ನೀಡಲಾಗುತ್ತದೆ. ಈಗಾಗಲೇ ಡಾಕ್ಯಾನಾಯ್ಕ್ ಇವರ ಕುಟುಂಬದವರ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳುಹಿಸಲಾಗಿದ್ದು ಉಳಿದ ಇಬ್ಬರಿಂದ ದಾಖಲೆಗಳನ್ನು ಪಡೆದು ಸರ್ಕಾರಕ್ಕೆ ಕಳುಹಿಸಲು ಇವರ ಸಹಾಯಕ್ಕಾಗಿ ಕಂದಾಯ ನಿರೀಕ್ಷಕರಿಗೆ ಸೂಚನೆ ನೀಡಲಾಗಿದ್ದು ಆದಷ್ಟು ಬೇಗ ಇವರ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳುಹಿಸಿ ನೆರವು ನೀಡಲಾಗುತ್ತದೆ, ಇತ್ತೀಚೆಗೆ ಕೊಲೆಯಾದ ಮರಿಗೊಂಡನಹಳ್ಳಿ ಶಿವರಾಜ್ ಮನೆಗೆ ಭೇಟಿ ನೀಡಿದ್ದು, ಅತ್ಯಂತ ಸಂಕಷ್ಟದಲ್ಲಿದ್ದಾರೆ, ಇವರಿಗೆ ಆದಷ್ಟು ಬೇಗ ಸರ್ಕಾರದ ಸವಲತ್ತನ್ನು ತಲುಪಿಸಬೇಕಾಗಿದೆ ಎಂದರು.



ದೌರ್ಜನ್ಯ ಪ್ರಕರಣದಡಿ ಈ ವರ್ಷ ಒಟ್ಟು 60 ಪ್ರಕರಣಗಳು ದಾಖಲಾಗಿದ್ದು, ಇದರಲ್ಲಿ 3 ಕೊಲೆ, 8 ಅತ್ಯಾಚಾರ, 49 ಇತರೆ ದೌರ್ಜನ್ಯದ ಪ್ರಕರಣಗಳಾಗಿವೆ. ಇದರಲ್ಲಿ 28 ಕ್ಕೆ ಚಾರ್ಜ್‌ಶೀಟ್ ಸಲ್ಲಿಕೆಯಾಗಿವೆ, ಎಫ್‌ಐಆರ್ ಹಂತದಲ್ಲಿ ರೂ. 38.70 ಲಕ್ಷ ಮತ್ತು ಚಾರ್ಜ್‌ಶೀಟ್ ಹಂತದಲ್ಲಿ ರೂ.79.88 ಲಕ್ಷ ಸೇರಿ 1.18 ಕೋಟಿ ಪರಿಹಾರ ನೀಡಿದ್ದು, 66 ಪರಿಶಿಷ್ಟ ಜಾತಿ, 56 ಪರಿಶಿಷ್ಟ ಪಂಗಡದವರು ಸೇರಿ 122 ಸಂತ್ರಸ್ಥರಿಗೆ ಪರಿಹಾರ ಒದಗಿಸಲಾಗಿದೆ.

ದೌರ್ಜನ್ಯ ತಡೆ ಕಾಯ್ದೆಯಡಿ ಎರಡನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ 2024 ಜುಲೈನಲ್ಲಿ 144, ಆಗಸ್ಟ್‌ನಲ್ಲಿ 147, ಸೆಪ್ಟೆಂಬರ್‌ನಲ್ಲಿ 145 ಪ್ರಕರಣಗಳಿದ್ದು, ಈ ಮೂರು ತಿಂಗಳ ಅವಧಿಯಲ್ಲಿ 10 ಪ್ರಕರಣಗಳು ವಿಲೇಯಾಗಿವೆ. ಪ್ರಸ್ತುತ ಸೆಪ್ಟೆಂಬರ್ ಅಂತ್ಯಕ್ಕೆ 143 ಪ್ರಕರಣಗಳು ನ್ಯಾಯಾಲಯದಲ್ಲಿ ಬಾಕಿ ಇದ್ದು ಇದರಲ್ಲಿ 2018 ರ 1, 2019 ರ 3, 2020 ರ 20, 2021 ರಲ್ಲಿನ 14, 2022 ರ ಅವಧಿಯ 32, 2023 ರಲ್ಲಿನ 49 ಮತ್ತು 2024 ರಲ್ಲಿನ 34 ಪ್ರಕರಣಗಳಿವೆ. ಚಾರ್ಜ್‌ಶೀಟ್ ಹಾಕದಿರುವ ಪ್ರಕರಣಗಳಲ್ಲಿ ಕೂಡಲೇ ಚಾರ್ಜ್‌ಶೀಟ್ ಹಾಕಲು ತಿಳಿಸಿದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಪಿ. ಎನ್.ಲೋಕೇಶ್, ಜಿ.ಪಂ. ಮುಖ್ಯ ಯೋಜನಾಧಿಕಾರಿ ಮಲ್ಲಾನಾಯ್ಕ, ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ನಾಗರಾಜ್, ಸಮಿತಿ ನಾಮನಿರ್ದೇಶಿತ ಸದಸ್ಯರು ಉಪಸ್ಥಿತರಿದ್ದರು.

# ಕನ್ನಿಕಾ ಪರಮೇಶ್ವರಿ ಅಮ್ಮನವರಿಗೆ ಮಾಹೇಶ್ವರಿ ದೇವಿ ಅಲಂಕಾರ

ಶ್ರೀ ಕನ್ಯಕಾಪರಮೇಶ್ವರಿ ದೇವಸ್ಥಾನ ಸಂಘದ ವತಿಯಿಂದ ಶ್ರೀ ಶರನ್ನವರಾತ್ರಿ ಪ್ರಯುಕ್ತ ಶ್ರೀ ಕನ್ನಿಕಾ ಪರಮೇಶ್ವರಿ ದೇವಸ್ಥಾನದಲ್ಲಿ ಇಂದು ಅಮ್ಮನವರಿಗೆ ಮಾಹೇಶ್ವರಿ ದೇವಿ ಅಲಂಕಾರ ಮಾಡಲಾಗುವುದು. ಪ್ರತಿ ದಿನ ಸಂಜೆ 5 ರಿಂದ 6 ರವರೆಗೆ ವಾಸವಿ ಭಜನಾ ಮಂಡಳಿಯವರಿಂದ ಲಲಿತ ಸಹಸ್ರ ನಾಮಾರ್ಚನೆ, ಹೇಮಾ ಶ್ರೀನಿವಾಸ್ ಸಂಗಡಿಗರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಲಿವೆ. ಪ್ರತಿ ದಿನ ಸಂಜೆ 7.30 ರಿಂದ ಪ್ರಾಕಾರೋತ್ಸವ, ಕುಂಕುಮಾರ್ಚನೆ, ಮಂತ್ರ ಪುಷ್ಪ, ಅಷ್ಟಾವಧಾನ, ಮಹಾಮಂಗಳಾರತಿ ನಂತರ ತೀರ್ಥ ಪ್ರಸಾದ ವಿನಿಯೋಗ ನಡೆಯಲಿದೆ.

# ಪಾಕಿಸ್ತಾನಿ ಕಲಾವಿದರ ಚಲನಚಿತ್ರ ನಿಷೇಧಕ್ಕೆ ಹಿಂದೂ ಜನ ಜಾಗೃತಿ ಮನವಿ

ರಾಣೇಬೆನ್ನೂರು, ಅ. 3 - ದ ಲೆಜೆಂಡ್ ಆಫ್ ಮೌಲಾ ಜಟ್ ಭಾರತದ ವಿರುದ್ಧ ಅಘೋಷಿತ ಯುದ್ಧ ಸಾರಿ ಸಾವಿರಾರು ಸೈನಿಕರು, ನಿರಪರಾಧಿ ಭಾರತೀಯರನ್ನ ಕೊಲ್ಲುವ ಮಾಹಿರ ಖಾನ್, ಹುಮೈಮಾ ಮಲ್ಲಿಕ್, ಪರಿಶ್ ಶಫಿ ಮುಂತಾದ ಪಾಕಿಸ್ತಾನಿ ಕಲಾವಿದರು ನಟಿಸಿರುವ ಚಲನಚಿತ್ರವನ್ನು ಭಾರತದಲ್ಲಿ ಪ್ರದರ್ಶಿಸಲು ಅವಕಾಶ ನೀಡದಂತೆ ತಡೆಯಬೇಕು ಎಂದು ಹಿಂದೂ ಜನ ಜಾಗೃತಿ ಸಮೀತಿ ಒತ್ತಾಯಿಸಿದೆ. ಭಾರತದ ಅನೇಕ ಕಲಾವಿದರ ಚಲನಚಿತ್ರಗಳ ಪ್ರದರ್ಶನಕ್ಕೆ ಪಾಕಿಸ್ತಾನದಲ್ಲಿ ಅವಕಾಶ ಕಲ್ಪಿಸದ ಪರಿಸ್ಥಿತಿ ಇದ್ದು, ಹಿಂದೂಗಳನ್ನ ಕೊಲೆ ಮಾಡುವ ಚಲನಚಿತ್ರಕ್ಕೆ ಭಾರತದಲ್ಲಿ ಅವಕಾಶ ಕೊಡುವದು ಹಿಂದೂಗಳ ಮೇಲೆ ಮಾನಸಿಕ ದೌರ್ಜನ್ಯ ಎಸಗಿದಂತೆ ಆಗಿದ್ದು ಕೇಂದ್ರ ಗೃಹ ಮಂತ್ರಿಗಳು ಇದನ್ನ ತಡೆಯಬೇಕು ಸಮೀತಿಯ ಜಿ.ಜಿ. ಹೊಟ್ಟಿಗೌಡ್ರ, ಜಟ್ಟೆಪ್ಪ ಕರೇಗೌಡ, ಹನುಮಂತಪ್ಪ ಕಬ್ಬಾರ ಮತ್ತಿತರರು ತಹಶೀಲ್ದಾರಿಗೆ ಮನವಿ ಅರ್ಪಿಸಿದರು.



**ರಾಣೇಬೆನ್ನೂರು**

# ಹೋರಾಟಕ್ಕೆ ಸಂದ ಜಯ : ಎಐಡಿಎಸ್‌ಓ

ದಾವಣಗೆರೆ, ಅ. 3- ರಾಜ್ಯದ ಸರ್ಕಾರಿ ಪದವಿ ವಿದ್ಯಾರ್ಥಿಗಳು ನಡೆಸಿದ ಹೋರಾಟಕ್ಕೆ ಸ್ಪಂದಿಸಿರುವ ರಾಜ್ಯ ಸರ್ಕಾರ ಅತಿಥಿ ಉಪನ್ಯಾಸಕರನ್ನು ನೇಮಕ ಮಾಡಿಕೊಳ್ಳುವಂತೆ ಆದೇಶ ಹೊರಡಿಸಿದೆ. ಹಿಂದಿನ ವರ್ಷದ ಉಪನ್ಯಾಸಕರನ್ನು ಮುಂದುವರೆಸಲು ಸರ್ಕಾರ ನೀಡಿರುವ ಆದೇಶ ವಿದ್ಯಾರ್ಥಿಗಳ ಹೋರಾಟಕ್ಕೆ ಸಂದ ಜಯ ಎಂದು ಆಲ್ ಇಂಡಿಯಾ ಡೆಮಾಕ್ರೆಟಿಕ್ ಸ್ಟೂಡೆಂಟ್ ಆರ್ಗನೈಜೇಷನ್ ಜಿಲ್ಲಾ ಕಾರ್ಯದರ್ಶಿ ಟಿ.ಎಸ್. ಸುಮನ್ ತಿಳಿಸಿದ್ದಾರೆ.



ದಾವಣಗೆರೆ ಪರಿಕ್ಷಾ ಕೇಂದ್ರವೊಂದರ ಬಳಿ ಪಿಎಸ್‌ಐ ಪರಿಕ್ಷಾ ಪ್ರಶ್ನೆ ಪತ್ರಿಕೆಗಳನ್ನು ಕೊಂಡೊಯ್ಯುತ್ತಿರುವುದು ಹಾಗೂ ಪರೀಕ್ಷಗೆ ಬಂದ ಅಭ್ಯರ್ಥಿಯೊಬ್ಬರು ಕಿವಿಗೆ ಹಾಕಿಕೊಂಡಿದ್ದ ಓಲೆ ತೆಗೆಸುತ್ತಿರುವ ಪೊಲೀಸ್ ಸಿಬ್ಬಂದಿ.

# ನಗರದಲ್ಲಿ ಪಿಎಸ್‌ಐ ಪರೀಕ್ಷೆ ಸುಗಮ

**11 ಕೇಂದ್ರಗಳಲ್ಲಿ 3909 ಅಭ್ಯರ್ಥಿಗಳು ಹಾಜರು**

ದಾವಣಗೆರೆ, ಅ.3 - ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ನಡೆಸಲಾಗುತ್ತಿದ್ದ ಪಿಎಸ್‌ಐ ನೇಮಕಾತಿ ಪರೀಕ್ಷೆ ಗುರುವಾರ ಸುಗಮವಾಗಿ ನೆರವೇರಿದೆ.


ನಗರದ 11 ಕೇಂದ್ರಗಳಲ್ಲಿ ನಡೆದ ಮೊದಲ ಹಾಗೂ ಎರಡನೇ ಪತ್ರಿಕೆ ಪರೀಕ್ಷೆಗೆ 3,909 ಅಭ್ಯರ್ಥಿಗಳು ಹಾಜರಾಗಿದ್ದರು. ಒಟ್ಟು 11 ಕೇಂದ್ರಗಳಿಂದ 6,464 ಅಭ್ಯರ್ಥಿಗಳು ನೋಂದಾಯಿಸಿದ್ದು, ಇದರಲ್ಲಿ 2,051 ಅಭ್ಯರ್ಥಿಗಳು ಗೈರು ಹಾಜರಾಗಿದ್ದರು. ಉಳಿದಂತೆ ಪರೀಕ್ಷೆ ಸುಗಮವಾಗಿ ನಡೆದಿದೆ ಎಂದು ಜಿಲ್ಲಾಧಿಕಾರಿ ಜಿ.ಎಂ.ಗಂಗಾಧರಸ್ವಾಮಿ ತಿಳಿಸಿದ್ದಾರೆ. ಪಿ.ಎಸ್.ಐ. ಪರೀಕ್ಷೆಗಾಗಿ ಅಭ್ಯರ್ಥಿಗಳಿಗೆ ಹಲವಾರು ಸೂಚನೆಗಳನ್ನು ನೀಡಲಾಗಿತ್ತು. ಪರೀಕ್ಷಾ ಕೇಂದ್ರಗಳಲ್ಲಿ ಬಿಗಿ ಬಂದೋಬಸ್ತ್ ನಲ್ಲಿ ನಿಯಮಗಳ ಪಾಲನೆಗೆ ಕ್ರಮ ತೆಗೆದುಕೊಳ್ಳಲಾಗಿತ್ತು. ನಿಯಮ ಪಾಲಿಸದ ಅಭ್ಯರ್ಥಿಗಳನ್ನು ತಡೆದು, ಈ ಬಗ್ಗೆ ಸೂಚನೆಯನ್ನೂ ನೀಡುತ್ತಿದ್ದುದು ಕಂಡು ಬಂತು. ಪರೀಕ್ಷೆಗಾಗಿ ಡ್ರೆಸ್ ಕೋಡ್ ವಿಧಿಸಲಾಗಿತ್ತು ಹಾಗೂ ಎಲೆಕ್ಟ್ರಾನಿಕ್ ಉಪಕರಣಗಳನ್ನು ತೆಗೆದುಕೊಂಡು ಹೋಗು ವುದನ್ನು ನಿರ್ಬಂಧಿಸಲು ಮುನ್ನೆಚ್ಚರಿಕೆ ವಹಿಸಲಾಗಿತ್ತು.

# ಶ್ರೀ ದುರ್ಗಶಕ್ತಿ ದೇವಿಯ ಪೂಜೆ



ದಾವಣಗೆರೆ, ಅ.3- ಚಿಕ್ಕಮಣಿ ದೇವರಾಜ ಅರಸು ಬಡಾವಣೆಯಲ್ಲಿ ಸಾರ್ವಜನಿಕ ಕ್ಷೇಮಾಭಿವೃದ್ಧಿ ಸಮಿತಿ ಮತ್ತು ಶ್ರೀ ಬನ್ನಿಮಾಕಳಿ ಸಮಿತಿ ವತಿಯಿಂದ 3ನೇ ವರ್ಷದ ವಿಜಯದಶಮಿ ಹಬ್ಬದ ಪ್ರಯುಕ್ತ 2ನೇ ದಿನದ ಶ್ರೀ ದುರ್ಗ ಶಕ್ತಿ ದೇವಿಯ ಪೂಜೊ ನೆರವೇರಿದೆ.

# ಶ್ರೀ ಬನಶಂಕರಿ ದೇವಿಗೆ ಗೌರಿ ಅಲಂಕಾರ



ದಾವಣಗೆರೆ, ಅ.3- ನಗರದ ಹಳೇಬೇತೂರು ರಸ್ತೆಯಲ್ಲಿರುವ ಶ್ರೀ ಬನಶಂಕರಿ ದೇವಸ್ಥಾನದಲ್ಲಿ ನವರಾತ್ರಿ ಅಂಗವಾಗಿ ಇಂದು ಶ್ರೀದೇವಿಗೆ ಗೌರಿ ಅಲಂಕಾರ ಮಾಡಲಾಗಿತ್ತು.



# ಬೇಲಿಮಲ್ಲೂರು ಗ್ರಾಮ ಪಂಚಾಯತಿ ಉಪಾಧ್ಯಕ್ಷರಾಗಿ ಗೀತಮ್ಮ

ಹೊನ್ನಾಳಿ, ಅ. 3 - ತಾಲ್ಲೂಕಿನ ಬೇಲಿಮಲ್ಲೂರು ಗ್ರಾಮ ಪಂಚಾಯತಿ ಉಪಾಧ್ಯಕ್ಷರಾಗಿ ಕೋಟೆ ಮಲ್ಲೂರು ಗೀತಮ್ಮ ಮಹೇಶ್ವರಪ್ಪ ಅವಿರೋಧ ಆಯ್ಕೆ ಯಾಗಿರುವುದಾಗಿ ಚುನಾವಣಾ ಅಧಿಕಾರಿ ಆಗಿರುವ ಸಾಸ್ವೆಹಳ್ಳಿ ಭದ್ರನಾಲಾ ವಿಭಾಗದ ಕಾರ್ಯಪಾಲಕ ಅಭಿಯಂತರ ಪ್ರವೀಣ್ ತಿಳಿಸಿದ್ದಾರೆ. ಬೇಲಿ ಮಲ್ಲೂರು ಜಯಪ್ಪನವರಿಂದ ತೆರವಾದ ಉಪಾಧ್ಯಕ್ಷ ಸ್ಥಾನಕ್ಕೆ ಗುರುವಾರ ಚುನಾವಣೆ ನಡೆಯಿತು. ಪಂಚಾಯಿತಿ ಅಧ್ಯಕ್ಷರಾದ ಕಮಲಮ್ಮ, ಸದಸ್ಯರಾದ ಮಂಜಮ್ಮ, ಸವಿತಾ, ರತ್ನಮ್ಮ, ನೀಲಮ್ಮ, ಚಂದ್ರಪ್ಪ, ಲಕ್ಷ್ಮಿ, ಪಿ.ಬಿ ಹನುಮಂತಪ್ಪ, ಅಣ್ಣಪ್ಪ, ಕೆ. ಹನುಮಂತಪ್ಪ , ನಾಗರಾಜ್ ಶಾಂತಾಬಾಯಿ, ಪಿ.ಡಿ.ಓ ಪರಮೇಶ್ ಕೊಳ್ಳೂರು ಉಪಸ್ಥಿತರಿದ್ದರು.

# ಲೋಕಿಕೆರೆ : ವಿಜಯ ದುರ್ಗಾ ಪರಮೇಶ್ವರಿಗೆ ವಿಭೂತಿ ಅಲಂಕಾರ

ದಾವಣಗೆರೆ ತಾಲ್ಲೂಕಿನ ಲೋಕಿಕೆರೆ ಗ್ರಾಮದ ಕೋಡಿಹಳ್ಳಿ ರಸ್ತೆಯಲ್ಲಿನ ಶ್ರೀ ತ್ರಿಕುಟಾಚಲ ದೇವಸ್ಥಾನದಲ್ಲಿ ಶ್ರೀ ವಿಜಯದುರ್ಗಾ ಪರಮೇಶ್ವರಿ ಅಮ್ಮನವರ ನವರಾತ್ರಿ ಮಹೋತ್ಸವ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಗಿದ್ದು, ಇಂದು ಅಮ್ಮನವರಿಗೆ ವಿಭೂತಿ ಅಲಂಕಾರ ಮಾಡಲಾಗುವುದು. ಮಧ್ಯಾಹ್ನ ಅನ್ನ ದಾಸೋಹ ಏರ್ಪಡಿಸಲಾಗಿದೆ.

# ಭಾವಪೂರ್ಣ ಶ್ರದ್ಧಾಂಜಲಿ



ಜ.ಜ.ಮು. ವೈದ್ಯಕೀಯ ಮಹಾವಿದ್ಯಾಲಯದ ನಿವೃತ್ತ ಹಿರಿಯ ಪ್ರಾಧ್ಯಾಪಕರೂ, ನಮ್ಮ ಬಂಧುಗಳೂ ಆಗಿರುವ

**ಡಾ. ತಿಪ್ಪೇಸ್ವಾಮಿ ಎ.ಪಿ.** ಅವರು

ದಿನಾಂಕ 03.10.2024ರಂದು ನಿಧನರಾಗಿದ್ದು, ಶ್ರೀಯುತರಿಗೆ ಭಾವಪೂರ್ಣ ಶ್ರದ್ಧಾಂಜಲಿ.

ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಹಾಗೂ ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ದಯಪಾಲಿಸಲೆಂದು ಭಗವಂತನಲ್ಲಿ ಪ್ರಾರ್ಥನೆ.

**ದುಃಖತಪ್ತರು:**

ಸಿಬ್ಬಂದಿ ವರ್ಗ, **ಶ್ರೀ ರಾಮಕೃಷ್ಣ ನರ್ಸಿಂಗ್ ಹೋಮ್,** ದಾವಣಗೆರೆ.
ಪಿ.ಜೆ. ಬಡಾವಣೆ, 8ನೇ ಮುಖ್ಯರಸ್ತೆ, ದಾವಣಗೆರೆ.

ಸಿಬ್ಬಂದಿ ವರ್ಗ, **ಸಂತಾನ ಫರ್ಟಿಲಿಟಿ ಸೆಂಟರ್,** ದಾವಣಗೆರೆ.

ಸಿಬ್ಬಂದಿ ವರ್ಗ, **ಶ್ರೀ ರಾಮಕೃಷ್ಣ ಮೆಡಿಕಲ್ಸ್,** ದಾವಣಗೆರೆ.

ಸಿಬ್ಬಂದಿ ವರ್ಗ, **ಅಜಿತ್ ನರ್ಸಿಂಗ್ ಹೋಂ,** ರಾಯಬಾಗ್.

# ಭಾವಪೂರ್ಣ ಶ್ರದ್ಧಾಂಜಲಿ



ಎಂ.ಸಿ.ಸಿ. ಎ ಬ್ಲಾಕ್, ದಾವಣಗೆರೆ ವಾಸಿ ಖ್ಯಾತ ಉದ್ಯಮಿಗಳಾದ

**ಚಂದ್ರಶೇಖರ್ ಎಸ್. ಹಳ್ಳೂರು**

ಇವರು ದಿನಾಂಕ : 03.10.2024ರ ಗುರುವಾರ ಬೆಳಗಿನ ಜಾವ ನಿಧನರಾಗಿದ್ದಾರೆಂದು ತಿಳಿಸಲು ವಿಷಾದಿಸುತ್ತೇವೆ. ಭಗವಂತನು ಇವರ ಆತ್ಮಕ್ಕೆ ಶಾಂತಿಕೊಟ್ಟು, ಇವರ ಕುಟುಂಬಸ್ಥರಿಗೆ ದುಃಖ ಭರಿಸುವ ಶಕ್ತಿ ನೀಡಲೆಂದು ಪ್ರಾರ್ಥಿಸುತ್ತೇವೆ.

**ದಿ ವೆಜಿಟಬಲ್ ಪ್ಲಾಂಟ್ ಸೌಹಾರ್ದ ಸಹಕಾರಿ ಸಂಘ ನಿಯಮಿತ, ದಾವಣಗೆರೆ.**
ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕರುಗಳು
ಕಾರ್ಯನಿರ್ವಾಹಣಾಧಿಕಾರಿ ಹಾಗೂ ಸಿಬ್ಬಂದಿ ವರ್ಗ

# ಪುಣ್ಯಸ್ಮರಣೆ



**ಲಿಂ. ಎಸ್.ಎಂ. ಶಾಂತಮ್ಮ** (ಬಾಬಿ)

ನೀವು ನಮ್ಮನ್ನಗಲಿ ಇಂದಿಗೆ (04.10.2024) ಆರು ವರ್ಷಗಳಾದವು. ಸದಾ ನಿಮ್ಮ ನೆನಪಿನಲ್ಲಿ, ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿದ್ದೇವೆ.

ಪತಿ: **ಜೇರಟಗಿ ಎಸ್.ಎಂ. ರೇವಣಸಿದ್ದಯ್ಯ ಶಾಸ್ತ್ರಿಗಳು**
ಅರ್ಚಕರು, ಶ್ರೀ ಶಂಭುಲಿಂಗೇಶ್ವರ ದೇವಸ್ಥಾನ, ವಿನೋಬನಗರ, ದಾವಣಗೆರೆ.
ಮಕ್ಕಳು, ಸೊಸೆಯಂದಿರು ಹಾಗೂ ಮೊಮ್ಮಕ್ಕಳು.
ಸಿದ್ದೇಶ್ವರ ಮಠ ಹಾಗೂ ಕರಿಸಿದ್ದೇಶ್ವರ ಮಠದ ಬಂಧುಗಳು
ಮೆಘಾ ಫಿಕ್ಸ್, ವಿನೋಬನಗರ, ದಾವಣಗೆರೆ. ಮೊ: 98808 99895

# ಚಿರಸ್ಮರಣೆ



**ಎಂ. ಸಣ್ಣಕರಿಬಸಪ್ಪ**

ಪೂಜ್ಯರಾದ ನೀವು ನಮ್ಮನ್ನಗಲಿ
ಇಂದಿಗೆ (04.10.2024)
ಎರಡು ವರ್ಷಗಳಾದರು
ನಿಮ್ಮ ನೆನಪು, ಪ್ರೀತಿ-ವಾತ್ಸಲ್ಯಗಳು
ನಮ್ಮ ಮನದಲ್ಲಿ ಸದಾ ಹಸಿರು.
ನಿಮ್ಮ ಸದ್ಗುಣ, ಆದರ್ಶ
ನಮಗೆ ದಾರಿದೀಪ,
ಸದಾ ನಿಮ್ಮನ್ನು ನೆನೆಯುವ...

**ಶ್ರೀಮತಿ ಪುಷ್ಪ ಕರಿಬಸಪ್ಪ, ವಿನಯ್ ಎಂ.ಕೆ., ಡಾ|| ಭುವನಾ ವಿ. ಮುಂಡರಗಿ**

# ಚೇತನ್ ಜಿ. ರಾಕುಂಡೆ ನಿಧನ



ದಾವಣಗೆರೆ ಸಿಟಿ ಎಂಸಿಸಿ 'ಎ' ಬ್ಲಾಕ್ 2ನೇ ಮೇನ್ (# 3714/115) ವಾಸಿ ಎಸ್ಕೇರ್ ಮೇನ್ಸ್ ವೇರ್ಸ್ ಗೋವಿಂದ ರಾವ್ ರಾಕುಂಡೆ ಅವರ ಪುತ್ರ ಚೇತನ ಜಿ. ರಾಕುಂಡೆ (38) ಅವರು ದಿನಾಂಕ: 3.10.2024ರಂದು ಗುರುವಾರ ಬೆಳಿಗ್ಗೆ 9.05ಕ್ಕೆ ನಿಧನರಾಗಿದ್ದಾರೆ. ಪತ್ನಿ, ತಂದೆ, ತಾಯಿ, ಸಹೋದರಿ ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ : 04.10.2024ರ ಶುಕ್ರವಾರ ಬೆಳಿಗ್ಗೆ 11ಕ್ಕೆ ನಗರದ ಪಿ.ಬಿ. ರಸ್ತೆಯ ವೈಕುಂಠಧಾಮದಲ್ಲಿ ನೆರವೇರಲಿದೆ.

## ನವರಾತ್ರಿ ಉತ್ಸವ....

# ಬ್ರಹ್ಮಚಾರಿಣಿದೇವಿ-ಒಂದು ಚಿಂತನೆ



'ದಧಾನ ಕರಪದ್ಮಾ ಭ್ಯಾಮಕ್ಷ ಮಾಲಾಕ ಮಂಡಲೂ ದೇವಿ ಪ್ರಸೀದತು ಮಯಿ ಬ್ರಹ್ಮ ಚಾರಿಣ್ಯ ನುತ್ತಮಾ'

ಎಂಬುದು ಬ್ರಹ್ಮಚಾರಿಣಿ ದೇವಿಯ ಶ್ಲೋಕ. ಇದರರ್ಥ ಕೈಯಲ್ಲಿ ಕಮಂಡಲು ಮತ್ತು ಜಪಮಣಿಗಳನ್ನು ಹಿಡಿದಿರುವಂತಹ ಉತ್ತಮವಾದ ದೇವಿ ಬ್ರಹ್ಮಚಾರಿಣಿಯೇ ನನ್ನನ್ನು ಕಾಪಾಡು ಪ್ರಸನ್ನಳಾಗಿ ವರಗಳನ್ನು ನೀಡು.

ಪಾರ್ವತಿ , ಪರಶಿವನನ್ನು ಒಲಿಸಲು, ಐದು ಸಾವಿರ ವರ್ಷ ಘೋರ ತಪಸ್ಸನ್ನು ಆಚರಿಸುತ್ತಾಳೆ. ಈ ತಪಸ್ಸಿಗಾಗಿ ತಾನು ಧರಿಸುವ ಅವತಾರವೇ ಬ್ರಹ್ಮಚಾರಿಣಿಯ ರೂಪ. ಬ್ರಹ್ಮಚಾರಿಣಿ ಎಂದರೆ ಬ್ರಹ್ಮಜ್ಞಾನವನ್ನು ಹರಿಸುತ್ತಾ ಸಾಧನೆ ಮಾಡುತ್ತಿರುವ ಉತ್ತಮ ಸಾಧಕಿ. ವೈದಿಕ ಧರ್ಮದಲ್ಲಿ "ಪವಿತ್ರ ಧಾರ್ಮಿಕ ಧರ್ಮವನ್ನು ಅನುಸರಿಸುವ ಹೆಣ್ಣು " ಎಂಬುದು ಇದರ ಅರ್ಥ.

ಕೇವಲ ಪತ್ರೆಗಳನ್ನು ಎಂದರೆ ಎಲೆಗಳನ್ನು ಸ್ವೀಕರಿಸಿ ತಪಸ್ಸು ಮಾಡುವ ಈಕೆಗೆ ಸುಪರ್ಣೆ ಎಂದು ಹೆಸರಾದರೆ, ಪತ್ರೆಗಳ ಸ್ವೀಕಾರವನ್ನು ನಿಲ್ಲಿಸಿದಾಗ ಅವಳಿಗೆ ಅಪರ್ಣೆ ಎಂದು ಹೆಸರಾಯಿತು.

ಕಾಮನು ಶಿವನಿಗೆ ಬಾಣವನ್ನು ಬಿಟ್ಟಾಗ, ಶಿವನು ಅವನನ್ನು ಭಸ್ಮ ಮಾಡುತ್ತಾನೆ. ಆದರೂ ಪಾರ್ವತಿಯು ಶಿವನನ್ನು ಒಲಿಸುವ ಪ್ರಯತ್ನವನ್ನು ನಿಲ್ಲಿಸುವುದಿಲ್ಲ, ತಪಸ್ಸನ್ನು ಮುಂದುವರೆಸುತ್ತಾಳೆ. ಆಗ ಶಿವನೇ ಮಾರು ವೇಷದಲ್ಲಿ ಬಂದು ತನ್ನ ಬಗ್ಗೆ ಅವಹೇಳನದ ನುಡಿಗಳನ್ನು ಹೇಳಿದಾಗ, ಅದನ್ನು ಕೇಳಲು ನಿರಾಕರಿಸಿ ಪಾರ್ವತಿ ತನ್ನ ತಪಸ್ಸನ್ನು ಮುಂದುವರೆಸುತ್ತಾಳೆ.

### ನವದುರ್ಗೆಯರ ಎರಡನೆ ರೂಪ

ಆಗ ಪ್ರಕಂಡಾಸುರ ಎಂಬ ರಾಕ್ಷಸನು ಅನೇಕ ಮಂದಿ ರಾಕ್ಷಸರ ಜೊತೆ ಬಂದು ಪಾರ್ವತಿಯ ಮೇಲೆ ಆಕ್ರಮಣ ಮಾಡುತ್ತಾನೆ, ತಪಸ್ಸು ಮುಗಿಯುವ ಹಂತದಲ್ಲಿರುವ ಪಾರ್ವತಿಯು ತನ್ನನ್ನು ರಕ್ಷಿಸಿಕೊಳ್ಳಲು ಅಸಮರ್ಥಳಾದಾಗ ಲಕ್ಷ್ಮಿ ಮತ್ತು ಸರಸ್ವತಿ ದೇವಿಯರು ಬಂದು ಸಹಾಯ ಮಾಡುತ್ತಾರೆ, ಆದರೆ ರಾಕ್ಷಸರ ಸಂಖ್ಯೆ ಹೆಚ್ಚುತ್ತಲೇ ಇರುತ್ತದೆ. ಬ್ರಹ್ಮಚಾರಿಣಿ ದೇವಿಯ ಕಮಂಡಲು ಆಗ ಬೀಳುತ್ತದೆ, ಅದರಿಂದ ಬಂದ ನದಿಯ ಪ್ರವಾಹದಲ್ಲಿ ಅನೇಕ ರಾಕ್ಷಸರು ಕೊಚ್ಚಿ ಹೋಗುತ್ತಾರೆ. ಕಡೆಗೆ ದೇವಿಯು ಕಣ್ಣು ತೆಗೆದು ನೋಡಿದಾಗ, ಅದರಿಂದ ಬಂದ ಬೆಂಕಿಯಲ್ಲಿ ರಾಕ್ಷಸರು ಬೂದಿಯಾಗುತ್ತಾರೆ.

ನಂತರ ಬ್ರಹ್ಮಚಾರಿ ವೇಷದಲ್ಲಿ ಶಿವನು ಬಂದು ಆಕೆಯನ್ನು ಅನೇಕ ಒಗಟುಗಳನ್ನು ಕೇಳುತ್ತಾನೆ, ಅವಕ್ಕೆಲ್ಲಾ ಅವಳು ಸರಿಯಾದ ಉತ್ತರವನ್ನು ನೀಡಿದಾಗ, ಅವಳ ಜ್ಞಾನ ಭಕ್ತಿ ಮತ್ತು ಸೌಂದರ್ಯಕ್ಕೆ ಸೋತು, ತನ್ನನ್ನು ವರಿಸಬೇಕಾಗಿ ಕೇಳುತ್ತಾನೆ. ಅವನೇ ಪರಶಿವ ಎಂದು ಅರಿತ ಬ್ರಹ್ಮಚಾರಿಣಿ ದೇವಿ ಒಪ್ಪುತ್ತಾಳೆ.

ತಾಯಿಯು ಈ ರೂಪದಲ್ಲಿ ಬಿಳಿಯ ವಸ್ತ್ರಗಳನ್ನು ಧರಿಸಿರುತ್ತಾಳೆ ಇದು ಶುದ್ಧತೆ ಮತ್ತು ಜ್ಞಾನದ ಸಂಕೇತವಾಗಿದೆ.ಒಂದು ಕೈಯಲ್ಲಿರುವ ಜಪಮಣಿ, ಸಿದ್ಧಿ ಪಡೆಯಬೇಕೆಂದಿರುವ ಸಾಧಕನಿಗೆ ಜಪ ಮಾಡುವುದು ಅತ್ಯಂತ ಮುಖ್ಯ ಎಂಬುದನ್ನು ತೋರಿಸುತ್ತದೆ. ಇನ್ನೊಂದು ಕೈಯಲ್ಲಿರುವ ಕಮಂಡಲು, ಅವಳ ತಪಸ್ಸಿಗೆ ಪೂಜೆಗೆ ಅನುಕೂಲವಾಗುತ್ತದೆ.

ಪಾರ್ವತಿಯ ತಪಸ್ಸಿನಿಂದ ಲೋಕ ಕಲ್ಯಾಣವಾಯಿತು, ಪರಮೇಶ್ವರನು ಒಲಿದದ್ದರಿಂದ ತಾರಕಾಸುರನೆಂಬ ದುಷ್ಟ ದೈತ್ಯನ ಸಂಹಾರವಾಯಿತು.

ಬ್ರಹ್ಮಚಾರಿಣಿ ರೂಪ ತಪಸ್ಸಿನ, ಸಾಧನೆಯ ಪ್ರಾಮುಖ್ಯತೆಯನ್ನು ತೋರಿಸುತ್ತದೆ. ಒಂದೇ ಮನಸ್ಸಿನಿಂದ ಧ್ಯಾನ ಮಾಡುವುದೇ ತಪಸ್ಸು ಎನಿಸುತ್ತದೆ. ಈಗಿನ ಕಾಲದಲ್ಲಿ ವಿದ್ಯಾರ್ಥಿಗಳು ಜ್ಞಾನಾರ್ಜನೆ ಮಾಡಬೇಕಾದರೆ, ಮನಸ್ಸನ್ನು ಜ್ಞಾನಾರ್ಜನೆಯ ಕಡೆಗೆ ಕೇಂದ್ರೀಕರಿಸಬೇಕಾಗುತ್ತದೆ. ಸೂರ್ಯನ ಕಿರಣಗಳು ಹರಡಿದಾಗ ಅದರಲ್ಲಿರುವ ಶಾಖ ಏನನ್ನು ಮಾಡುವುದಿಲ್ಲ, ಆದರೆ ಒಂದು ಕನ್ನಡಿಯನ್ನಿಟ್ಟು ಒಂದೇ ಕಡೆಗೆ ಕಿರಣಗಳನ್ನು ಕೇಂದ್ರೀಕರಿಸಿದರೆ ಬೆಂಕಿಯಂತೆ ಸುಡುತ್ತದೆ. ಅದೇ ರೀತಿ ನಮ್ಮ ಅಂತ:ಶಕ್ತಿಯನ್ನು ಒಂದೇ ಕಡೆಗೆ ಕೇಂದ್ರೀಕೃತ ಮಾಡುವುದೇ ತಪಸ್ಸು, ವಿದ್ಯೆಯನ್ನು ಕಲಿಯಲು ಕೇಂದ್ರೀಕೃತವಾಗಿಸಿದರೆ, ಅಸಾಧ್ಯವನ್ನು ಸಾಧಿಸಬಹುದಾದಂತಹ ಶಕ್ತಿ ನಮ್ಮ ಮಕ್ಕಳದಾಗುತ್ತದೆ.

ಈ ನಿಟ್ಟಿನಲ್ಲಿ ಬ್ರಹ್ಮಚಾರಿಣಿ ದೇವಿಯು ಎಲ್ಲರಿಗೂ ಪ್ರೇರಕಳಾಗಿದ್ದಾಳೆ, ಸಾಧನೆ ಮಾಡುವವರಿಗೆ ಶಕ್ತಿಯನ್ನು ತುಂಬುತ್ತಾಳೆ, ಸಾಧಕ ಹೇಗಿರಬೇಕು ಎಂಬುದನ್ನು ತೋರಿಸುತ್ತಾಳೆ.

ಇಂತಹ ಮಾತೆಯು ದೇಹದ ಸ್ವಾದಿಷ್ಠಾನ ಚಕ್ರದಲ್ಲಿ ನೆಲೆಯಾಗಿದ್ದಾಳೆ. ಯೋಗ ಸಾಧಕರು ಈ ಚಕ್ರದಲ್ಲಿ ಬ್ರಹ್ಮಚಾರಿಣಿ ದೇವಿಯ ಉಪಾಸನೆಯನ್ನು ಮಾಡುತ್ತಾರೆ.

ಇಂತಹ ದೇವಿಯ ಕೃಪೆಗೆ ನಾವೂ ಪಾತ್ರರಾಗೋಣ.

**- ಡಾ. ರೂಪಶ್ರೀ ಶಶಿಕಾಂತ್**, ದಾವಣಗೆರೆ.

## ನಗರದಲ್ಲಿ ನಾಳೆ ಹಿಂದೂ ಮಹಾ ಗಣಪತಿ ವಿಸರ್ಜನಾ ಮೆರವಣಿಗೆ

# ಸಂಚಾರಿ ಮಾರ್ಗಗಳಲ್ಲಿ ಭಾರೀ ಬದಲಾವಣೆ



ದಾವಣಗೆರೆ, ಅ.3- ನಗರದ ಹೈಸ್ಕೂಲ್ ಮೈದಾನದಲ್ಲಿ ಪ್ರತಿಷ್ಠಾಪಿಸಿರುವ ಹಿಂದೂ ಮಹಾ ಗಣಪತಿ ವಿಸರ್ಜನಾ ಮೆರವಣಿಗೆಯು ನಾಡಿದ್ದು ದಿನಾಂಕ 5 ರ ಶನಿವಾರ ನಡೆಯಲಿರುವುದರಿಂದ ಬೆಳಗ್ಗೆ 10 ರಿಂದ ರಾತ್ರಿ 11 ಗಂಟೆಯವರೆಗೆ ನಗರದಲ್ಲಿನ ವಾಹನ ಸಂಚಾರ ಮಾರ್ಗದಲ್ಲಿ ಬದಲಾವಣೆ ಮಾಡಿ ಜಿಲ್ಲಾಧಿಕಾರಿ ಜಿ. ಎಂ.ಗಂಗಾಧರಸ್ವಾಮಿ ಆದೇಶಿಸಿದ್ದಾರೆ

**ಬದಲಾವಣೆ ಮಾರ್ಗಗಳ ವಿವರ:** ಹರಿಹರ ಕಡೆಯಿಂದ ಬಾತಿ ಮೂಲಕ ಹಳೇ ಪಿ.ಬಿ ರಸ್ತೆಯಲ್ಲಿ ಬರುವ ಎಲ್ಲಾ ತರಹದ ಭಾರೀ ವಾಹನಗಳು ಮತ್ತು ಖಾಸಗಿ ಬಸ್ಸುಗಳು ಹರಿಹರ ನಗರದಿಂದ ನೇರವಾಗಿ ಶಿವಮೊಗ್ಗ ಬೈಪಾಸ್ ಮೂಲಕ ಚಲಿಸಿ ಬಾಡಾ ಕ್ರಾಸ್ ಮೂಲಕ ದಾವಣಗೆರೆ ನಗರಕ್ಕೆ ಆವರಗೆರೆ ಮಾರ್ಗವಾಗಿ ಬಂದು ಎ.ಪಿ.ಎಂ.ಸಿ ದನದ ಮಾರ್ಕೆಟ್ ಆವರಣಕ್ಕೆ ಬಂದು ಪ್ರಯಾಣಿಕರನ್ನು ಇಳಿಸಿ, ಅದೇ ಮಾರ್ಗವಾಗಿ ಮರಳಿ ಬಾಡಾ ಕ್ರಾಸ್ ಮೂಲಕ ತೆರಳುವುದು.

ಹರಿಹರ ಕಡೆಯಿಂದ ಬಾತಿ ಮೂಲಕ ಹಳೇ ಪಿ.ಬಿ ರಸ್ತೆಯಲ್ಲಿ ಬರುವ ಎಲ್ಲಾ ಕೆ.ಎಸ್.ಆರ್.ಟಿ.ಸಿ ಬಸ್ಸುಗಳು ಹರಿಹರ ನಗರದಿಂದ ನೇರವಾಗಿ ಶಿವಮೊಗ್ಗ ಬೈಪಾಸ್ ಮೂಲಕ ಚಲಿಸಿ ಬಾಡಾ ಕ್ರಾಸ್ ಮೂಲಕ ದಾವಣಗೆರೆ ನಗರಕ್ಕೆ ಆವರಗೆರೆ ಮಾರ್ಗವಾಗಿ ಬಂದು ನೂತನ ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣಕ್ಕೆ ಬಂದು ಪ್ರಯಾಣಿಕರನ್ನು ಇಳಿಸಿ ಅದೇ ಮಾರ್ಗವಾಗಿ ಮರಳಿ ಬಾಡಾ ಕ್ರಾಸ್ ಮೂಲಕ ಕಾರ್ಯನಿರ್ವಹಿಸುವುದು.

ಚಿತ್ರದುರ್ಗ ಮತ್ತು ಸಂತೆಬೆನ್ನೂರು (ಬೀರೂರು-ಸಮ್ಮಸಗಿ ರಸ್ತೆ) ಮಾರ್ಗವಾಗಿ ಬರುವ ವಾಹನಗಳು ಮತ್ತು ಖಾಸಗಿ ಬಸ್ಸುಗಳು ಬಾಡಾ ಕ್ರಾಸ್ ಮೂಲಕ ದಾವಣಗೆರೆ ನಗರಕ್ಕೆ ಆವರಗೆರೆ ಮಾರ್ಗವಾಗಿ ಬಂದು ಎ.ಪಿ.ಎಂ.ಸಿ ಯ ದನದ ಮಾರ್ಕೆಟ್ ಆವರಣಕ್ಕೆ ಬಂದು ಪ್ರಯಾಣಿಕರನ್ನು ಇಳಿಸಿ, ಅದೇ ಮಾರ್ಗವಾಗಿ ಮರಳಿ ಬಾಡಾ ಕ್ರಾಸ್ ಮೂಲಕ ಸಾಗುವುದು.

ಚಿತ್ರದುರ್ಗ ಮತ್ತು ಸಂತೇಬೆನ್ನೂರು (ಬೀರೂರು-ಸಮ್ಮಸಗಿ ರಸ್ತೆ) ಮಾರ್ಗವಾಗಿ ಬರುವ ಎಲ್ಲಾ ಕೆ.ಎಸ್.ಆರ್.ಟಿ.ಸಿ ಬಸ್ಸುಗಳು ಬಾಡಾ ಕ್ರಾಸ್ ಮೂಲಕ ದಾವಣಗೆರೆ ನಗರಕ್ಕೆ ಬಂದು ನೂತನ ಕೆ. ಎಸ್.ಆರ್.ಟಿ.ಸಿ ಬಸ್ ನಿಲ್ದಾಣದಲ್ಲಿ ಪ್ರಯಾಣಿಕರನ್ನು ಇಳಿಸಿ ಅದೇ ಮಾರ್ಗವಾಗಿ ಮರಳಿ ಬಾಡಾ ಕ್ರಾಸ್ ಮಾರ್ಗವಾಗಿ ಕಾರ್ಯನಿರ್ವಹಿಸುವುದು.

ಜಗಳೂರು ಮತ್ತು ಕಂಚಿಕೆರೆ ಮಾರ್ಗವಾಗಿ ಬರುವ ಎಲ್ಲಾ ಕೆ.ಎಸ್.ಆರ್.ಟಿ.ಸಿ ಬಸ್ಸುಗಳು ವೆಂಕಟೇಶ್ವರ ಸರ್ಕಲ್‌ನಿಂದ ಬಂಬೂಬಜಾರ್ ರಸ್ತೆ ಮಾರ್ಗವಾಗಿ ಆರ್.ಎಂ.ಸಿ ಫ್ಲೈ ಓವರ್ ಮುಖಾಂತರ ನೂತನ ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣಕ್ಕೆ ಬಂದು ಪ್ರಯಾಣಿಕರನ್ನು ಇಳಿಸಿ ವಾಪಾಸ್ ಅದೇ ಮಾರ್ಗವಾಗಿ ಕಾರ್ಯ ನಿರ್ವಹಿಸುವುದು.

ಚನ್ನಗಿರಿ ಕಡೆಯಿಂದ ಹದಡಿ ರಸ್ತೆ ಮೂಲಕ ಬರುವ ಎಲ್ಲಾ ತರಹದ ವಾಹನಗಳು ಮತ್ತು ಖಾಸಗಿ ಮತ್ತು ಕೆ.ಎಸ್.ಆರ್. ಟಿ.ಸಿ ಬಸ್ಸುಗಳು ಹದಡಿ ಅಂಡರ್ ಪಾಸ್ ಮೂಲಕ ಹದಡಿ ರಸ್ತೆಯ ಮಾಗನೂರು ಬಸಪ್ಪ ಮೈದಾನದಲ್ಲಿ ಪ್ರಯಾಣಿಕರನ್ನು ಇಳಿಸಿ, ಅಲ್ಲಿಂದಲೇ ವಾಪಾಸ್ ಹೊರಡುವುದು.

ಶಾಮನೂರು ಬೈಪಾಸ್ ಮೂಲಕ ಬರುವ ಎಲ್ಲಾ ತರಹದ ಭಾರೀ ವಾಹನಗಳು ಶಾರದಾಂಬಾ ಸರ್ಕಲ್ ಮೂಲಕ ಬಾಲಾಜಿ ಸರ್ಕಲ್ ಕಡೆ ಚಲಿಸುವುದು, ಸಂಗೊಳ್ಳಿ ರಾಯಣ್ಣ ಸರ್ಕಲ್ ಕಡೆ ಬಾರದೇ ಜಿ.ಎಂ.ಐ.ಟಿ ಕಾಲೇಜ್ ಕಡೆ ಚಲಿಸುವುದು.

ಕೊಂಡಜ್ಜಿ ಮಾರ್ಗವಾಗಿ ಬರುವ ವಾಹನಗಳು, ಖಾಸಗಿ ಮತ್ತು ಕೆ.ಎಸ್.ಆರ್.ಟಿ.ಸಿ ಬಸ್ಸುಗಳು ಆರ್.ಟಿ.ಓ ಸರ್ಕಲ್ ವರೆಗೆ ಬಂದು ಪ್ರಯಾಣಿಕರನ್ನು ಇಲ್ಲಿಯೇ ಇಳಿಸಿ ಅಲ್ಲಿಂದಲೇ ವಾಪಾಸ್ ಹೋಗುವುದು.

# ದಾವಲ್‌ಪೇಟೆ ಶ್ರೀ ಚೌಡೇಶ್ವರಿ ದೇವಿಗೆ ವಿಶೇಷ ಅಲಂಕಾರ

ದಾವಣಗೆರೆಯ ದಾವಲ್‌ಪೇಟೆ ಶ್ರೀ ಚೌಡೇಶ್ವರಿ ದೇವಿ ದೇವಸ್ಥಾನದಲ್ಲಿ ಶ್ರೀ ಚೌಡೇಶ್ವರಿ ದೇವಿಗೆ ದಸರಾ ಮಹೋತ್ಸವದ ವಿಶೇಷ ಅಲಂಕಾರಗಳು ಇಂದಿನಿಂದ ಇದೇ ದಿನಾಂಕ 12ರವರೆಗೆ ನಡೆಯಲಿವೆ. ಇಂದು ಎಲೆ ಅಡಿಕೆ ಅಲಂಕಾರ, 5 ರ ಶನಿವಾರ ನವಧಾನ್ಯ ಅಲಂಕಾರ, 6ರ ಭಾನುವಾರ ಬಳೆ ಅಲಂಕಾರ, 7 ರ ಸೋಮವಾರ ಸಂತಾನ ಲಕ್ಷ್ಮಿ ಅಲಂಕಾರ, 8ರ ಮಂಗಳವಾರ ಮಹಾಗೌರಿ ಅಲಂಕಾರ, 9ರ ಬುಧವಾರ ಸರಸ್ವತಿ ಅಲಂಕಾರ, 10 ರಂದು ಮಹಿಷಾಸುರ ಮರ್ಧಿನಿ ಅಲಂಕಾರ, 11ರ ಶುಕ್ರವಾರ ರಾಜರಾಜೇಶ್ವರಿ ಅಲಂಕಾರ, 12ರ ಶನಿವಾರ ಲಕ್ಷ್ಮಿ ನೋಟಿನ ಅಲಂಕಾರ ನಡೆಯಲಿವೆ.

# ಮಹಾಲಯ ಅಮಾವಾಸ್ಯೆ: ಉಕ್ಕಡಗಾತ್ರಿಯಲ್ಲಿ ಭಕ್ತ ಸಾಗರ



ಮಲೇಬೆನ್ನೂರು, ಅ. 3 - ಮಹಾಲಯ ಅಮಾವಾಸ್ಯೆ ಪ್ರಯುಕ್ತ ಸುಕ್ಷೇತ್ರ ಉಕ್ಕಡಗಾತ್ರಿಯಲ್ಲಿ ಪವಾಡ ಪುರುಷ ಶ್ರೀ ಗುರು ಕರಿಬಸವೇಶ್ವರ ಅಜ್ಜಯ್ಯನ ದರ್ಶನ ಪಡೆಯಲು ಮಂಗಳವಾರ ರಾತ್ರಿಯಿಂದಲೇ ಸಾವಿರಾರು ಭಕ್ತರು ಜಮಾಗೊಂಡಿದ್ದರು.

ಭಕ್ತರು ತುಂಗಭದ್ರಾ ನದಿಯ ಸ್ನಾನ ಘಟ್ಟದಲ್ಲಿ ಪುಣ್ಯ ಸ್ನಾನ ಮಾಡಿದ ನಂತರ ವಿಶಿಷ್ಟ ಪೂಜೆ, ಪುನಸ್ಕಾರಗಳನ್ನು ಮಾಡಿದರು.

ನಿಂಬೆ ಹಣ್ಣುಗಳ ರಾಶಿ ಮೇಲೆ ಗಂಡು, ಹೆಣ್ಣು ಎನ್ನದೆ ದಿಂಡುರುಳು ಸೇವೆ ಸಲ್ಲಿಸಿದರು.

ಭೂತ ಪ್ರೇತ ಆವಾಹನೆ ಆದವರು ಅಜ್ಜಯ್ಯನ ಸನ್ನಿಧಿಯ ಅಣತಿ ದೂರದಲ್ಲಿ 'ಅಜ್ಜಯ್ಯ ಬಿಡು, ನನ್ನ ಕಾಡಬೇಡ' ಎಂದು ಚೀರುತ್ತಿದ್ದ ದೃಶ್ಯ ಸಾಮಾನ್ಯವಾಗಿತ್ತು. ಭೂತ, ಪ್ರೇತ ನಿವಾರಣೆ, ವ್ಯಾಜ್ಯ, ಕಂಕಣ ಭಾಗ್ಯ, ಸಂತಾನ ಭಾಗ್ಯ, ಉದ್ಯೋಗ, ರೋಗ ರುಜಿನಗಳ ಪರಿಹಾರಕ ಅಜ್ಜಯ್ಯ ಎಂಬ ನಂಬಿಕೆಯಿಂದ ಪರಿಹಾರ ಕಂಡವರು ಬಂದು ಹರಕೆ ತೀರಿಸಿದರು. ಕೆಲವರು ಮುಡಿ ತೆಗೆಸಿದರು.

ಹೊರ ರಾಜ್ಯಗಳಿಂದಲೂ ಭಕ್ತರು ಉಕ್ಕಡಗಾತ್ರಿಗೆ ಬಂದು ಅಜ್ಜಯ್ಯನ ದರ್ಶನ ಪಡೆದರು.

ಭಕ್ತರಿಗೆ ತಂಗಲು ವಸತಿ ಗೃಹಗಳಲ್ಲಿ ವ್ಯವಸ್ಥೆ ಮತ್ತು ಊಟದ ವ್ಯವಸ್ಥೆಯನ್ನು ದೇವಸ್ಥಾನದ ಟ್ರಸ್ಟ್ ವತಿಯಿಂದ ಮಾಡಲಾಗಿತ್ತು. ಅಜ್ಜಯ್ಯನ ಗದ್ದಿಗೆಗೆ ಅಭಿಷೇಕ ಮತ್ತು ವಿಶೇಷ ಪೂಜಾಲಂಕಾರ ಮಾಡಲಾಗಿತ್ತು.

# ಗಾಂಧೀಜಿ ಜಯಂತಿ : ಕುಂದುವಾಡ ಕೆರೆಯಲ್ಲಿ ಸ್ವಚ್ಛತಾ ಕಾರ್ಯ



ದಾವಣಗೆರೆ, ಅ. 3- ಕುಂದವಾಡ ಕೆರೆಯಲ್ಲಿ ಮಹಾತ್ಮ ಗಾಂಧಿಜೀ ಜಯಂತಿ ಅಂಗವಾಗಿ ವಾಯುವಿಹಾರಿಗಳ ಬಳಗದವರು ಸ್ವಚ್ಛತಾ ಕಾರ್ಯ ನಡೆಸಿದರು. ನಗರಕ್ಕೆ ಕುಡಿಯುವ ನೀರು ಪೂರೈಸುವ ಕೆರೆ ಅಸ್ವಚ್ಛತೆಯಿಂದ ಕೂಡಿದ್ದು ಸ್ವಚ್ಛ ಮಾಡುವವರೇ ಇಲ್ಲವಾಗಿದ್ದಾರೆ.

ಸಂಬಂಧಪಟ್ಟವರಿಗೆ ಕೆರೆಯಲ್ಲಿ ಸ್ವಚ್ಛತೆ ಮಾಡಿ ಅಂತ ತಿಳಿಸಿದರೂ ಸಹ ಒಬ್ಬರ ಮೇಲೆ ಮತ್ತೊಬ್ಬರು ಹೇಳುತ್ತಾ ತಮ್ಮ ಜವಾಬ್ದಾರಿ ಕಳೆದುಕೊಳ್ಳುತ್ತಿದ್ದಾರೆ ಎಂಬುದು ವಾಯುವಿಹಾರಿಗಳ ಬಳಗದವರ ಆರೋಪ ಕಂಡ ವಾಯುವಿಹಾರಿಗಳೇ ಕೆರೆಯಲ್ಲಿ ಬಿದ್ದ ಪ್ಲಾಸ್ಟಿಕ್, ಕಸವನ್ನು ಸ್ವಚ್ಛಗೊಳಿಸಿದರು.



# ನಗರದ ಶ್ರೀ ರೇಣುಕಾ ಎಲ್ಲಮ್ಮ ದೇವಿ ದೇವಸ್ಥಾನದಲ್ಲಿ ವಿಶೇಷ ಅಲಂಕಾರ

ಬಸವ ಬುದ್ಧ ಭೀಮ ನಗರದ ಶ್ರೀ ರೇಣುಕಾ ಎಲ್ಲಮ್ಮ ದೇವಿ ದೇವಸ್ಥಾನದಲ್ಲಿ ಇಂದಿನಿಂದ ದಸರಾ ಹಬ್ಬದ ಕಾರ್ಯಕ್ರಮ ಗಳು ನಡೆಯಲಿವೆ. ಇಂದು ಅರಿಶಿಣ ಅಲಂಕಾರ, ನಾಳೆ ಶನಿವಾರ ಕುಂಕುಮ ಅಲಂಕಾರ, ದಿನಾಂಕ 6ರಂದು ಗಂಧದ ಅಲಂಕಾರ, ದಿನಾಂಕ 7ರಂದು ಬುತ್ತಿ ಅಲಂಕಾರ, ದಿನಾಂಕ 8 ರಂದು ತರಕಾರಿ ಅಲಂಕಾರ, ದಿನಾಂಕ 9ರಂದು ಬಳೆ ಅಲಂಕಾರ, ದಿನಾಂಕ 10ರಂದು ಮಿಂಚಿನ ಅಲಂಕಾರ, ದಿನಾಂಕ 11ರಂದು ನವ ದುರ್ಗೆಯರ ಅಲಂಕಾರ, ದಿನಾಂಕ 12 ರಂದು ಬೆಣ್ಣೆ ಅಲಂಕಾರ ಮಾಡಲಾಗುತ್ತದೆ ಮತ್ತು ಸಂಜೆ ನಗರದಲ್ಲಿ ಪಲ್ಲಕ್ಕಿ ಉತ್ಸವ, ಬನ್ನಿ ಮುಡಿಯುವ ಕಾರ್ಯಕ್ರಮ ಇರುತ್ತದೆ.

# ಮಾದಕ ದಂಧೆಯಲ್ಲಿ ಕಾಂಗ್ರೆಸ್ ನಾಯಕ ಭಾಗಿ : ಬಿಜೆಪಿ ಆರೋಪ

ನವದೆಹಲಿ, ಅ. 3 – 5,600 ಕೋಟಿ ರೂ.ಗಳ ಮಾದಕ ವಶ ಪ್ರಕರಣದಲ್ಲಿ ಬಂಧಿತ ತುಶಾರ್ ಗೋಯಲ್, ದೆಹಲಿ ಯುವ ಕಾಂಗ್ರೆಸ್ ಆರ್‌ಟಿಐ ದಳದ ಮುಖ್ಯಸ್ಥ ಎಂದು ಬಿಜೆಪಿ ಆರೋಪಿಸಿದೆ. ಆದರೆ, ಆರೋಪ ತಳ್ಳಿ ಹಾಕಿರುವ ಯುವ ಕಾಂಗ್ರೆಸ್, ಈ ಹಿಂದೆಯೇ ಗೋಯಲ್ ಉಚ್ಚಾಟನೆ ಮಾಡಲಾಗಿತ್ತು ಎಂದು ತಿಳಿಸಿದೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿರುವ ಬಿಜೆಪಿ ವಕ್ತಾರ ಹಾಗೂ ಸಂಸದ ಸುಧಾಂಶು ತ್ರಿವೇದಿ, ಕಾಂಗ್ರೆಸ್ ಪಕ್ಷ ಮಾದಕದ ಹಣವನ್ನು ಚುನಾವಣಾ ಪ್ರಚಾರಕ್ಕಾಗಿ ಬಳಸುತ್ತಿದೆಯೇ? ಎಂದು ಪ್ರಶ್ನಿಸಿದ್ದಾರೆ.

ಪ್ರಕರಣದ ಆರೋಪಿಯು ಮಾಜಿ ಮುಖ್ಯಮಂತ್ರಿ ಭೂಪಿಂದರ್ ಸಿಂಗ್ ಹೂಡಾ ಅವರ ಪುತ್ರನ ಮೊಬೈಲ್ ಸಂಖ್ಯೆ ಹೊಂದಿದ್ದಾರೆ. ಹೂಡಾ ಕುಟುಂಬದವರು ಈ ಬಗ್ಗೆ ಉತ್ತರ ನೀಡಬೇಕು ಎಂದು ತ್ರಿವೇದಿ ಒತ್ತಾಯಿಸಿದ್ದಾರೆ. ಆರೋಪವನ್ನು ತಳ್ಳಿ ಹಾಕಿರುವ ಯುವ ಕಾಂಗ್ರೆಸ್, ತ್ರಿವೇದಿ ಹೇಳಿಕೆಗಳು ಆಧಾರ ರಹಿತ. ಪಕ್ಷ ವಿರೋಧಿ ಚಟುವಟಿಕೆಗಳ ಹಿನ್ನೆಲೆಯಲ್ಲಿ ಅಕ್ಟೋಬರ್ 17, 2022ರಲ್ಲಿ ಗೋಯಲ್ ಉಚ್ಚಾಟನೆ ಮಾಡಲಾಗಿತ್ತು ಎಂದು ತಿಳಿಸಿದೆ.

# ವರದಕ್ಷಿಣೆ ಸಾವು: ಆರೋಪಿಗೆ 7 ವರ್ಷ ಕಠಿಣ ಕಾರಾಗೃಹ ಶಿಕ್ಷೆ

ದಾವಣಗೆರೆ, ಅ.3- ವರದಕ್ಷಿಣೆ ಕಿರುಕುಳ ನೀಡಿದ ಆರೋಪಿಗೆ ಇಲ್ಲಿನ 1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯವು 7 ವರ್ಷ ಕಠಿಣ ಕಾರಾಗೃಹ ಶಿಕ್ಷೆ ಹಾಗೂ 25 ಸಾವಿರ ರೂ. ದಂಡ ವಿಧಿಸಿ ಇಂದು ತೀರ್ಪು ನೀಡಿದೆ.

ತನ್ನ ಮಗಳನ್ನು ಪ್ರೀತಿಸಿ ಮದುವೆಯಾಗಿದ್ದ ಚನ್ನಗಿರಿ ಗ್ರಾಮದ ಯೋಗೇಶ್ ದೈಹಿಕ ಹಾಗೂ ಮಾನಸಿಕ ಹಿಂಸೆ ನೀಡುತ್ತಾ, ವರದಕ್ಷಿಣೆ ತರುವಂತೆ ಕಿರುಕುಳ ನೀಡುತ್ತಿದ್ದ. ಇದರಿಂದ ಬೇಸತ್ತು ಮಗಳು ಸುಮಿತ್ರ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಎಂದು ಆರೋಪಿಸಿ ಇಮಾನಮಟ್ಟಿಯ ಹನುಮಂತ ಭೋವಿ ಅವರು ಚನ್ನಗಿರಿ ಠಾಣೆಯಲ್ಲಿ ದೂರು ದಾಖಲಿಸಿದ್ದರು.

ತನಿಖಾಧಿಕಾರಿಯಾದ ದಾವಣಗೆರೆ ಗ್ರಾಮಾಂತರ ವಿಭಾಗದ ಪೊಲೀಸ್ ಉಪಾಧೀಕ್ಷಕ ಚಿಕ್ಕಸ್ವಾಮಿ ತನಿಖೆ ನಡೆಸಿ ಆರೋಪಿತರ ವಿರುದ್ಧ ದೋಷಾರೋಪಣೆ ಪಟ್ಟಿ ಸಲ್ಲಿಸಿದ್ದರು.

ವಿಚಾರಣೆ ನಡೆಸಿದ ನ್ಯಾಯಾಧೀಶರಾದ ಮಂಜಪ್ಪ ಹನುಮಂತಪ್ಪ ಅಣ್ಣಯ್ಯನವರ್, ಆರೋಪ ಸಾಬೀತಾದ್ದರಿಂದ 7 ವರ್ಷ ಕಠಿಣ ಕಾರಾಗೃಹ ಶಿಕ್ಷೆ, 25 ಸಾವಿರ ರೂ. ದಂಡ ವಿಧಿಸಿದ್ದು, ದಂಡದ ಮೊತ್ತದಲ್ಲಿ 20 ಸಾವಿರ ರೂ. ಸಂತ್ರಸ್ತೆ ಕುಟುಂಬಕ್ಕೂ, 5 ಸಾವಿರ ರೂ. ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವಂತೆಯೂ ಆದೇಶಿಸಿದ್ದಾರೆ. ಪಿರ್ಯಾದಿ ಪರವಾಗಿ ಸರ್ಕಾರಿ ವಕೀಲರಾದ ಕೆ.ಎಸ್ ಸತೀಶ್ ಕುಮಾರ್ ನ್ಯಾಯ ಮಂಡಿಸಿದ್ದರು.

# ಜೈಲುಗಳಲ್ಲಿನ ಜಾತಿ ಭೇದಕ್ಕೆ ಸುಪ್ರೀಂ ಕೋರ್ಟ್ ತಡೆ

ನವದೆಹಲಿ, ಅ. 3- ಜೈಲುಗಳಲ್ಲಿ ದೈಹಿಕ ಶ್ರಮ, ಪ್ರತ್ಯೇಕ ಬ್ಯಾರಕ್ ಸೇರಿದಂತೆ ಹಲವು ವಿಷಯಗಳಲ್ಲಿ ಜಾತಿಯ ಆಧಾರದ ಮೇಲೆ ಕೈದಿಗಳ ನಡುವೆ ಮಾಡಲಾಗುತ್ತಿದ್ದ ವ್ಯತ್ಯಾಸವನ್ನು ರದ್ದುಗೊಳಿಸಿ ಸುಪ್ರೀಂ ಕೋರ್ಟ್ ಮಹತ್ವದ ಆದೇಶ ಹೊರಡಿಸಿದೆ. ಬುಡಕಟ್ಟು ಸಮುದಾಯಗಳು ಹಾಗೂ ಪುನರಾವರ್ತಿತ ಅಪರಾಧಿಗಳ ಜೊತೆಗೂ ಪಕ್ಷಪಾತ ಮಾಡುವಂತಿಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಜೈಲಿನಲ್ಲಿ ಇರುವವರಿಗೂ ಘನತೆಯಿಂದ ಬದುಕುವ ಹಕ್ಕಿದೆ ಎಂದು ಹೇಳಿರುವ ಸುಪ್ರೀಂ ಕೋರ್ಟ್, ಕರ್ನಾಟಕ ಸೇರಿದಂತೆ 10 ಜೈಲುಗಳಲ್ಲಿನ ನಿಯಮಗಳಲ್ಲಿದ್ದ ಜಾತಿ ಆಧರಿತ ಪಕ್ಷಪಾತ ರದ್ದುಗೊಳಿಸಿದೆ.

ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಜೈಲಿನ ನಿಯಮಗಳಲ್ಲಿ ಮೂರು ತಿಂಗಳ ಒಳಗಾಗಿ ತಿದ್ದುಪಡಿ ತರಬೇಕು ಹಾಗೂ ಈ ಬಗ್ಗೆ ಕ್ರಮ ತೆಗೆದುಕೊಂಡ ವರದಿಯನ್ನು ತನಗೆ ಸಲ್ಲಿಸಬೇಕು ಎಂದು ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಹಾಗೂ ನ್ಯಾಯಮೂರ್ತಿಗಳಾದ ಜೆ.ಬಿ. ಪರ್ಡಿವಾಲ ಹಾಗೂ ಮನೋಜ್ ಮಿಶ್ರ ಅವರನ್ನು ಒಳಗೊಂಡ ಪೀಠ ತಿಳಿಸಿದೆ.

ಜೈಲುಗಳಲ್ಲಿ ಜಾತಿ ಆಧರಿತ ಪಕ್ಷಪಾತ ಇರುವ ಬಗ್ಗೆ ಪತ್ರಕರ್ತೆ ಸುಕನ್ಯಾ ಶಾಂತ ಅವರು ಸಾರ್ವಜನಿಕ ಹಿತಾಸಕ್ತಿ ಅರ್ಜಿ ದಾಖಲಿಸಿದ್ದರು.

ಈ ಅರ್ಜಿಯ ವಿಚಾರಣೆ ನಡೆಸಿ 148 ಪುಟಗಳ ತೀರ್ಪು ನೀಡಿರುವ ಸುಪ್ರೀಂ ಕೋರ್ಟ್, ವಿಚಾರಣಾಧೀನರು ಇಲ್ಲವೇ ಶಿಕ್ಷೆಗೆ ಗುರಿಯಾದವರನ್ನು ಜೈಲಿನ ಒಳಗೆ ಕರೆದುಕೊಂಡು ಹೋಗುವಾಗ ಜಾತಿಯನ್ನು ನಮೂದಿಸಬಾರದು ಎಂದು ತಿಳಿಸಿದೆ.

# ಬ್ಯೂರತ್ ಮೇಲೆ ಇಸ್ರೇಲ್ ದಾಳಿ, 9 ಸಾವು

ಬ್ಯೂರತ್, ಅ. 3 - ಲೆಬನಾನ್ ರಾಜಧಾನಿ ಬ್ಯೂರತ್ ಅಪಾರ್ಟ್‌ಮೆಂಟ್ ಮೇಲೆ ಇಸ್ರೇಲ್ ನಡೆಸಿದ ವೈಮಾನಿಕ ದಾಳಿಯಲ್ಲಿ ಒಂಭತ್ತು ಜನ ಸಾವನ್ನಪ್ಪಿದ್ದಾರೆ. ಉಗ್ರರ ನೆಲೆಗಳ ಮೇಲೆ ಇಸ್ರೇಲ್ ದಾಳಿ ನಡೆಸುತ್ತಾ ಬಂದಿದೆ. ಆದರೆ, ಬ್ಯೂರತ್ ಹೃದಯ ಭಾಗದ ಮೇಲೆ ದಾಳಿ ನಡೆಸಿರುವುದು ಇದೇ ಮೊದಲು. ಬುಧವಾರ ತಡರಾತ್ರಿ ಈ ದಾಳಿ ನಡೆದಿದೆ. ದಾಳಿಗೆ ಮುಂಚೆ ಇಸ್ರೇಲ್ ಯಾವುದೇ ಎಚ್ಚರಿಕೆ ನೀಡಲಿಲ್ಲ. ದಾಳಿ ನಡೆಸಲಾದ ಸ್ಥಳದ ಸಮೀಪವೇ ವಿಶ್ವಸಂಸ್ಥೆ ಕೇಂದ್ರ ಕಚೇರಿ, ಪ್ರಧಾನಮಂತ್ರಿ ಕಚೇರಿ ಹಾಗೂ ಸಂಸತ್ ಭವನಗಳಿವೆ. ನಿನ್ನೆ ಲೆಬನಾನ್ ಮೇಲೆ ಇಸ್ರೇಲ್ ನಡೆಸಿದ ದಾಳಿಯ ವೇಳೆ 28 ಆರೋಗ್ಯ ಕಾರ್ಯಕರ್ತರು ಸಾವನ್ನಪ್ಪಿರುವುದಾಗಿ ವಿಶ್ವ ಆರೋಗ್ಯ ಸಂಘಟನೆ ತಿಳಿಸಿದೆ.


**ಕರ್ನಾಟಕ ನೀರಾವರಿ ನಿಗಮ ನಿಯಮಿತ**
(ಕರ್ನಾಟಕ ಸರ್ಕಾರದ ಉದ್ಯಮ)
**ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಕನೀನಿನಿ, ನಂ.5, ಭದ್ರಾ ನಾಲಾ ವಿಭಾಗ, ದಾವಣಗೆರೆ. ಫೋ: 08192-264669**
**ಇ-ಮೇಲ್: eebcddvg@yahoo.co.in**

**ಅಲ್ಪಾವಧಿ ಇ-ಪ್ರೋಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ**
**(ಕೆಪಿಪಿಪಿ ಪೋರ್ಟ್‌ಲ್ ಮುಖಾಂತರ ಮಾತ್ರ)**

ಉಲ್ಲೇಖ:- No:EE/KNNL/BCD-5/DVG/PB-5/Informative Quotation/2024-25/1217/8 Dated: 01.10.2024

ವ್ಯವಸ್ಥಾಪಕ ನಿರ್ದೇಶಕರು, ಕ.ನೀ.ನಿ.ನಿ, ಬೆಂಗಳೂರು ಇವರ ಪರವಾಗಿ ಉಲ್ಲೇಖಿತ ಪತ್ರದಲ್ಲಿ ಕಾರ್ಯಪಾಲಕ ಇಂಜಿನಿಯರ್, ಕ.ನೀ.ನಿ.ನಿ, ನಂ.5 ಭದ್ರಾ ನಾಲಾ ವಿಭಾಗ, ದಾವಣಗೆರೆ ಕಛೇರಿಯಡಿಯಲ್ಲಿ ಅರ್ಹ ಏಜೆನ್ಸಿಯವರಿಂದ ಕೋಟೆಷನ್ ದರಗಳನ್ನು ಅಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ದಿ: 15.10.2024 ಸಂಜೆ 5.00 ಘಂಟೆಯವರೆಗೆ ಕೋಟೆಷನ್ ದರಗಳನ್ನು ಸಲ್ಲಿಸಬಹುದಾಗಿರುತ್ತದೆ. ಅವಶ್ಯಕ ಐಟಂಗಳ ವಿವರ ಹಾಗೂ ಪರಿಮಾಣಗಳ ವಿವರಗಳನ್ನು ಮತ್ತು ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ಕೆಳಗೆ ಸಹಿ ಮಾಡಿದವರ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ. ಯಾವುದೇ ಕಾರಣ ನೀಡದೆ ಟೆಂಡರ್‌ಗಳನ್ನು ಮುಂದೂಡುವ, ಅಂಗಿಕರೀಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಕೆಳಗೆ ಸಹಿ ಮಾಡಿರುವ ಅಧಿಕಾರಿಗಳು ಕಾಯ್ದಿರಿಸಿಕೊಂಡಿರುತ್ತಾರೆ.

**Name of Work:-** "Davangere LIS: Consultancy services for detailed survey, investigation preparation of designs, drawings, estimates, Detailed Project Report, Package estimate, DTP and necessary Land Acquisition proposals for Davangere lift irrigation scheme for filling up of 7 existing MI/ZP/AGR/WRD tanks in Davangere Tq, Harihar Tq and Harapanahalli Tq by lifting water from Tunga Bhadra River near Deetur village In Harihara Taluk, Davanagere District."

**Number of Items:- 19**

ವಾಸಾಇ/ಡಿವಿಜಿ/392/ ಕೆಎಸ್‌ಎಂಸಿಎ/2024-25

**ಸಹಿ/- ಕಾರ್ಯಪಾಲಕ ಇಂಜಿನಿಯರ್, ಕನೀನಿನಿ ನಂ.5 ಭದ್ರಾ ನಾಲಾ ವಿಭಾಗ, ದಾವಣಗೆರೆ.**


# ದಿನನಿತ್ಯದ ಚಟುವಟಿಕೆ, ಉತ್ತಮ ಆಹಾರದಿಂದ ಆರೋಗ್ಯ

## ಹಲವಾಗಲು ಗ್ರಾಮದಲ್ಲಿನ ಉಚಿತ ಆರೋಗ್ಯ ಶಿಬಿರದಲ್ಲಿ ಲಕ್ಷ್ಮಿದೇವಿ ಅಣ್ಣಪ್ಪ



**ಹರಪನಹಳ್ಳಿ**

ಹರಪನಹಳ್ಳಿ, ಅ. 3- ಉತ್ತಮ ಆಹಾರ ಪದ್ಧತಿ ಅಳವಡಿಸಿಕೊಂಡು, ದಿನನಿತ್ಯ ಒಂದಿಲ್ಲೊಂದು ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳುವುದರಿಂದ ಉತ್ತಮ ಆರೋಗ್ಯ ಕಾಪಾಡಿಕೊಳ್ಳಬಹುದು ಎಂದು ಯೋಗನರಸಿಂಹ ಸೌಹಾರ್ದ ಪತ್ತಿನ ಸಹಕಾರಿ ಬ್ಯಾಂಕ್ ಪ್ರಧಾನ ವ್ಯವಸ್ಥಾಪಕರಾದ ವೈ. ಎ. ಲಕ್ಷ್ಮಿದೇವಿ ಅಣ್ಣಪ್ಪ ಹೇಳಿದರು.

ಹಲವಾಗಲು ಗ್ರಾಮದಲ್ಲಿ ತಾಲ್ಲೂಕು ವಾಲ್ಮೀಕಿ ಸಮಾಜದ ಅಧ್ಯಕ್ಷ ವೈ. ಡಿ. ಅಣ್ಣಪ್ಪ, ಹಲವಾಗಲು ಗ್ರಾಮದ ಪ್ರಾಥಮಿಕ ಗ್ರಾಮೀಣ ಕೃಷಿ ಪತ್ತಿನ ಸಂಘ, ಲಕ್ಷ್ಮೀ ಸರ್ಜಿಕಲ್ ಟ್ರಾಮಾ ಆರ್ಥೋ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ (ರಾಣೇಬೆನ್ನೂರು) ಇವರ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಳ್ಳಲಾಗಿದ್ದ ಉಚಿತ ಆರೋಗ್ಯ ಶಿಬಿರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಗ್ರಾಮೀಣ ಪ್ರದೇಶದ ಜನರ ಆರೋಗ್ಯ ಕಾಪಾಡುವ ಹಿತದೃಷ್ಟಿಯಿಂದ ಈ ಆರೋಗ್ಯ ಶಿಬಿರ ಏರ್ಪಡಿಸಲಾಗಿದೆ. ಪ್ರತಿಯೊಬ್ಬರೂ ಆರೋಗ್ಯ ಕಾಪಾಡಿಕೊಂಡು ಸಾಧ್ಯವಾದಷ್ಟು ಜೀವನ ಶೈಲಿ ಬದಲಾವಣೆ ಮಾಡಿಕೊಳ್ಳುವುದು ಉತ್ತಮ ಎಂದರು.

ವೈ.ಎ.ಚಂದನ ಅಣ್ಣಪ್ಪ ಮಾತನಾಡಿ, ಸಮಾಜ ನಮಗೆ ಏನು ಮಾಡಿದೆ ಅನ್ನುವುದಕ್ಕಿಂತ ಮುಖ್ಯವಾಗಿ ಸಮಾಜಕ್ಕೆ ನಮ್ಮ ಕೊಡುಗೆ ಏನು ಎಂದು ಆಲೋಚಿಸಬೇಕು. ಈ ನಿಟ್ಟಿನಲ್ಲಿ ಇಂದು ಹಮ್ಮಿಕೊಂಡಿರುವ ಉಚಿತ ಆರೋಗ್ಯ ಶಿಬಿರಗಳಿಂದ ಬಡವರ, ಹಿಂದುಳಿದ ಹಾಗೂ ನಿರಾಶ್ರಿತರಿಗೆ ತುಂಬಾ ಅನುಕೂಲವಾಗುತ್ತದೆ ಎಂದು ಹೇಳಿದರು.

ಡಾ. ಸಂಜೀವ್ ಎಂ.ಮುದ್ರಿ ಮಾತನಾಡಿ, ಆರೋಗ್ಯವೇ ಮಹಾಭಾಗ್ಯ, ಸರ್ಕಾರ ಆಯುಷ್ಮಾನ್ ಭಾರತ್ ಕಾರ್ಡ್, ಯಶಸ್ವಿನಿ ಹಾಗೂ ಕೆಲವೊಂದು ಯೋಜನೆಗಳ ಸೌಲಭ್ಯ ಒದಗಿಸಿದೆ ಎಂದು ಹೇಳಿದರು.

ಕೃಷಿ ಪತ್ತಿನ ಸಹಕಾರಿ ಸಂಘದ ಅಧ್ಯಕ್ಷ ಬಿಳಿಚೋಡು ಗುಡ್ಡಪ್ಪ ಮಾತನಾಡಿ, ಯಶಸ್ವಿನಿ ಕಾರ್ಡ್ ಮಾಡಿಸಿದವರಿಗೆ ವಿವಿಧ ಸೌಲಭ್ಯಗಳು ಸಿಗುತ್ತವೆ. ಎಕ್ಸ್ ರೇ, ಸ್ಕ್ಯಾನಿಂಗ್ ಉಚಿತವಾಗಿ ಸಿಗಲಿದೆ. ಪ್ರತಿಯೊಬ್ಬರೂ ಇದರ ಪ್ರಯೋಜನ ಪಡೆದುಕೊಳ್ಳಬೇಕೆಂದು ಹೇಳಿದರು.

ವಾಲ್ಮೀಕಿ ನಾಯಕ ಸಮಾಜದ ಮಾಜಿ ಅಧ್ಯಕ್ಷ ಹೆಚ್. ಟಿ.ಗಿರೀಶ್, ಗ್ರಾಮ ಪಂಚಾಯಿತಿ ಅಧ್ಯಕ್ಷೆ ಭೋವಿ ಸರಿತಾ ರಮೇಶ್, ಉಪಾಧ್ಯಕ್ಷ ಎಂ. ನಾಗರಾಜ್, ಗ್ರಾ.ಪಂ. ಸದಸ್ಯೆ ರತ್ನಮ್ಮ ಜಯಣ್ಣ, ದಿವಾಕರ್, ಗ್ರಾಮದ ಮುಖಂಡರಾದ ಮಿಂಚು, ಪ್ರೀತಮ್, ಮತ್ತೂರು ಪ್ರಕಾಶ್, ಮಡಿವಾಳ ಬಸವರಾಜ್, ಎ.ಈಶಪ್ಪ, ಕಾರ್ಯನಿರ್ವಾಹಕ ಮಲ್ಲಿಕಾರ್ಜುನ್ ಸೇರಿದಂತೆ ಇತರರು ಇದ್ದರು.



ದಸರಾ ಉತ್ಸವದಲ್ಲಿ ಹಂ.ಪಾ. ನಾಗರಾಜಯ್ಯ ಅವರಿಗೆ ಗೌರವ

ಮೈಸೂರಿನ ಚಾಮುಂಡಿ ಬೆಟ್ಟದಲ್ಲಿ ದಸರಾ ಮಹೋತ್ಸವದ ಉದ್ಘಾಟನಾ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನಾಡೋಜ ಡಾ. ಹಂ. ಪಾ. ನಾಗರಾಜಯ್ಯ ಅವರನ್ನು ಸನ್ಮಾನಿಸಿದರು.

# ಸರ್ಕಾರ ಪತನಗೊಳಿಸುವ ಯತ್ನಕ್ಕೆ ಹಂಪ ನಾಗರಾಜಯ್ಯ ಟೀಕೆ

ಮೈಸೂರು, ಅ. 3 – ಚುನಾಯಿತ ಸರ್ಕಾರದ ಅವಧಿ ಮುಗಿಯುವ ಮೊದಲೇ ಪತನಗೊಳಿಸುವ ಯತ್ನವನ್ನು ಟೀಕಿಸಿರುವ ಸಾಹಿತಿ ಹಂಪಾ ನಾಗರಾಜಯ್ಯ, ಪ್ರತಿಪಕ್ಷಗಳು ಜನರ ವಿಶ್ವಾಸ ಗೆದ್ದು, ಮುಂದಿನ ಚುನಾವಣೆಯಲ್ಲಿ ಅಧಿಕಾರಕ್ಕೆ ಬರಬೇಕು ಎಂದರು.

ಚಾಮುಂಡಿ ಬೆಟ್ಟದಲ್ಲಿ ತಾಯಿ ಚಾಮುಂಡೇಶ್ವರಿಯ ಉತ್ಸವ ಮೂರ್ತಿಗೆ ಪುಷ್ಪಾರ್ಚನೆ ಮಾಡಿ, ನಾಡಹಬ್ಬ ದಸರಾಗೆ ಚಾಲನೆ ನೀಡಿದ ಬಳಿಕ ಅವರು ವೇದಿಕೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ಸರ್ಕಾರಗಳನ್ನು ಉರುಳಿಸುವ ದುರಾಲೋಚನೆ ಬರದಂತೆ ತಡೆದು, ಚುನಾಯಿತ ಸರ್ಕಾರಗಳನ್ನು ಉಳಿಸುವ ಚಿಂತನೆಗಳನ್ನು ಮೂಡಿಸಲೆಂದು ಬೇಡುತ್ತೇನೆ ಎಂದು ಹೇಳಿದರು. ಮೊದಲೇ ದೊಡ್ಡ ಹೊರೆಗಳಿಂದ ಬಳಲಿ ಬಸವಳಿದಿರುವ ಶ್ರೀಸಾಮಾನ್ಯರ ಹೆಗಲಿಗೆ ಮತ್ತೆ ಮತ್ತೆ ನಡೆಯುವ ಚುನಾವಣೆಗಳು ಇನ್ನಷ್ಟು ಭಾರ ಹೇರಿದರೆ ಕುಸಿಯುತ್ತಾನಷ್ಟೆ ಎಂದು ನಾಗರಾಜಯ್ಯ ಹೇಳಿದರು. ಯಾವುದೇ ಸರ್ಕಾರ ಶಾಶ್ವತವಾಗಿ ಅಧಿಕಾರದಲ್ಲಿ ಇರುವುದಿಲ್ಲ. ಈಗ ಪರಾಭವಗೊಂಡಿರುವ ಪಕ್ಷ ಜನರ ವಿಶ್ವಾಸ ಪಡೆದು ನಂತರ ಅಧಿಕಾರಕ್ಕೆ ಬರಬೇಕು. ಇದಕ್ಕೆ ಸಿದ್ಧಗೊಳ್ಳಲು ಐದು ವರ್ಷದ ಅವಧಿಯನ್ನು ಬಳಸಬಹುದು ಎಂದವರು ಹೇಳಿದರು.

# ಮುಡಾ : ಬೈರತಿ ಸುರೇಶ್ ಮೇಲೆ ಇಡಿ ಕಣ್ಣು

ಬೆಂಗಳೂರು, ಅ. 3 - ಮುಡಾ ಬಿಡಿ ನಿವೇಶನ ಹಂಚಿಕೆ ಹಗರಣಕ್ಕೆ ಸಂಬಂಧಿಸಿದಂತೆ ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಅವರಿಗೆ ಜಾರಿ ನಿರ್ದೇಶನಾಲಯ (ಇ.ಡಿ.) ನೋಟಿಸ್ ಜಾರಿ ಮಾಡಿದೆ.

ಇ.ಡಿ. ಅಧಿಕಾರಿಗಳು ಇಂದು ಬೆಳಗ್ಗೆ ಅವರ ಖಾಸಗಿ ನಿವಾಸಕ್ಕೆ ತೆರಳಿ ನೋಟಿಸ್ ನೀಡಿದ್ದಾರೆಂದು ಉನ್ನತ ಮೂಲಗಳು ತಿಳಿಸಿವೆ.

ದಸರಾ ಹಬ್ಬದ ನಂತರ ಕಚೇರಿಗೆ ಬಂದು ವಿಚಾರಣೆಗೆ ಹಾಜರಾಗುವುದಾಗಿ ಸಚಿವರು ತಿಳಿಸಿದ್ದಾರೆ ಎಂದೂ ಹೇಳಲಾಗಿದೆ.

ಆದರೆ, ಇದನ್ನು ಅಲ್ಲಗಳೆದಿರುವ ಬೈರತಿ ಸುರೇಶ್, ನನಗೆ ಇ.ಡಿ.ಯಿಂದ ಯಾವುದೇ ನೋಟಿಸ್ ಬಂದಿಲ್ಲ, ಇದು ಮಾಧ್ಯಮದವರ ಸೃಷ್ಟಿ ಎಂದಿದ್ದಾರೆ. ವರುಣಾ ಹಾಗೂ ಶ್ರೀರಂಗಪಟ್ಟಣ ವಿಧಾನಸಭಾ ಕ್ಷೇತ್ರಗಳ ಅಭಿವೃದ್ಧಿಗೆ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ 150 ಕೋಟಿ ರೂ.ಗಳಿಗೂ ಹೆಚ್ಚು ಹಣ ಬಳಕೆ ಮಾಡಿಕೊಳ್ಳಲಾಗಿದೆ ಎಂಬ ಆರೋಪದ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಇ.ಡಿ. ಈಗಾಗಲೇ ನೋಟಿಸ್ ಜಾರಿ ಮಾಡಿದೆ.

ಇಲಾಖೆ ಹೊಣೆ ಹೊತ್ತಿರುವ ನಗರಾಭಿವೃದ್ಧಿ ಸಚಿವರು, ಅಧಿಕಾರ ವಹಿಸಿಕೊಂಡ ನಂತರ ಈ ಹಣವನ್ನು ಎರಡು ವಿಧಾನಸಭಾ ಕ್ಷೇತ್ರಗಳ ಅಭಿವೃದ್ಧಿ ಕಾರ್ಯಗಳಿಗೆ ಬಿಡುಗಡೆ ಮಾಡುವಲ್ಲಿ ಸಚಿವರ ಪಾತ್ರ ಇದೆ ಎಂಬ ಆರೋಪವಿದೆ.

ಅಷ್ಟೇ ಅಲ್ಲ, ನಗರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ಬಿಡಿ ನಿವೇಶನಗಳ ಹಂಚಿಕೆಯಲ್ಲಿ ನಡೆದಿರುವ ಭ್ರಷ್ಟಾಚಾರದ ಬಗ್ಗೆ ಸಚಿವರಿಂದ ಮಾಹಿತಿ ಪಡೆಯಲು ಇ.ಡಿ. ಮುಂದಾಗಿದೆ.

ಮುಖ್ಯಮಂತ್ರಿ ಅವರ ಕುಟುಂಬ 14 ನಿವೇಶನಗಳನ್ನು ಪಡೆದಿದ್ದರು ಎಂಬ ಮಾಹಿತಿ ಹೊರಬಂದು ರಾಜಕೀಯ ವಲಯದಲ್ಲಿ ಅಲ್ಲೋಲ-ಕಲ್ಲೋಲವಾದ ನಂತರ ಇದರ ಶಮನಕ್ಕೆ ನಗರಾಭಿವೃದ್ಧಿ ಸಚಿವರು ಪ್ರವೇಶ ಮಾಡಿದ್ದರು.

ಬಿಡಿ ನಿವೇಶನ ಹಂಚಿಕೆ ವಿಷಯ ಅತಿರೇಕಕ್ಕೆ ಹೋಗುತ್ತಿದ್ದಂತೆ ಮುಡಾ ಕಚೇರಿಯಲ್ಲಿ ಇಡೀ ದಿನ ಬಿಡಾರ ಹೂಡಿದ ಸಚಿವರು ಅಧಿಕಾರಿಗಳ ಜೊತೆ ಕಡತಗಳನ್ನು ಪರಿಶೀಲಿಸಿದ್ದಲ್ಲದೆ, ಕೆಲವು ಪ್ರಮುಖ ಕಡತಗಳನ್ನು ಬೆಂಗಳೂರಿಗೆ ರವಾನಿಸಿದ್ದರೆಂಬ ಆರೋಪ ಕೇಳಿಬಂದಿತ್ತು.

ತದನಂತರ ಪ್ರಮುಖ ಕಡತಗಳಲ್ಲಿನ ಕೆಲವು ಸಾಲುಗಳಿಗೆ ವೈಟ್ನರ್ ಬಳಿದು ಹಗರಣಗಳನ್ನು ಮುಚ್ಚಿಹಾಕುತ್ತಿದ್ದಾರೆಂಬ ಆರೋಪವನ್ನು ಬಿಜೆಪಿ ಮುಖಂಡರು ಹಾಗೂ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಹೊರಿಸಿದ್ದರು.

ಹೈಕೋರ್ಟ್ ಹಾಗೂ ಜನಪ್ರತಿನಿಧಿಗಳ ನ್ಯಾಯಾಲಯ ಮುಖ್ಯಮಂತ್ರಿ ಕುಟುಂಬ ಪಡೆದ ನಿವೇಶನಗಳ ಕುರಿತಂತೆ ತನಿಖೆಗೆ ಆದೇಶಿಸಿದ ನಂತರ ಇ.ಡಿ. ಮಧ್ಯಪ್ರವೇಶ ಮಾಡಿದೆ.

ಇದು ಮುಂದಿನ ದಿನಗಳಲ್ಲಿ ಯಾವ ಯಾವ ಸ್ವರೂಪ ಪಡೆಯುತ್ತದೆ ಎಂದು ಕಾದು ನೋಡಬೇಕಿದೆ.

# ರಾಷ್ಟ್ರೀಯ ಖಾದ್ಯತೈಲ ಬೀಜ ಯೋಜನೆಗೆ ಒಪ್ಪಿಗೆ

ನವದೆಹಲಿ, ಅ. 3 – ರಾಷ್ಟ್ರೀಯ ಖಾದ್ಯ ತೈಲ ಹಾಗೂ ಖಾದ್ಯತೈಲ ಬೀಜ ಯೋಜನೆಗೆ ಕೇಂದ್ರ ಸರ್ಕಾರ ಒಪ್ಪಿಗೆ ನೀಡಿದೆ. 10,103 ಕೋಟಿ ರೂ.ಗಳ ಈ ಯೋಜನೆಯ ಮೂಲಕ ದೇಶದಲ್ಲಿ ಖಾದ್ಯ ತೈಲ ಉತ್ಪಾದನೆಗೆ ಉತ್ತೇಜನ ನೀಡಲು ಉದ್ದೇಶಿಸಲಾಗಿದೆ.

ಪಸಕ್ತ ದೇಶಕ್ಕೆ ಅಗತ್ಯವಾದ ಖಾದ್ಯ ತೈಲದ ಪೈಕಿ ಶೇ. 50ರಷ್ಟು ಆಮದು ಮಾಡಿಕೊಳ್ಳಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಖಾದ್ಯತೈಲ ವಿಷಯದಲ್ಲಿ ಭಾರತವನ್ನು ಸ್ವಾವಲಂಬಿ ಮಾಡಲು ಕೇಂದ್ರ ಸರ್ಕಾರ ಗುರಿ ಹೊಂದಿದೆ.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ನಡೆದ ಸಂಪುಟ ಸಭೆಯಲ್ಲಿ ಖಾದ್ಯ ತೈಲ ರಾಷ್ಟ್ರೀಯ ಯೋಜನೆಗೆ ಒಪ್ಪಿಗೆ ನೀಡಲಾಗಿದೆ. 2030-31ರವರೆಗೆ ಈ ಯೋಜನೆ ಜಾರಿಯಲ್ಲಿರಲಿದೆ. ಪ್ರಸಕ್ತ ವರ್ಷಕ್ಕೆ 39 ದಶಲಕ್ಷ ಟನ್ ಖಾದ್ಯ ತೈಲ ಉತ್ಪಾದಿಸಲಾಗುತ್ತಿದೆ. 2030 - 31ರ ವೇಳೆಗೆ 69.7 ದಶಲಕ್ಷ ಟನ್ ಖಾದ್ಯ ತೈಲ ಉತ್ಪಾದಿಸುವ ಗುರಿ ಹೊಂದಲಾಗಿದೆ. ಇದಕ್ಕಾಗಿ ಹೆಚ್ಚುವರಿ 40 ಲಕ್ಷ ಹೆಕ್ಟರ್ ಪ್ರದೇಶದಲ್ಲಿ ಖಾದ್ಯ ತೈಲ ಬೀಜಗಳ ಬೆಳೆಯುವ ಗುರಿ ಹೊಂದಲಾಗಿದೆ.

# ಸಾವರ್ಕರ್ ಗೋಮಾಂಸ, ಜಿನ್ನಾ ಹಂದಿ ಮಾಂಸ ಸೇವಿಸುತ್ತಿದ್ದರು

ಬೆಂಗಳೂರು, ಅ. 3 – ಹಿಂದುತ್ವವಾದಿ ವೀರ್ ಸಾವರ್ಕರ್ ಅವರು ಗೋಮಾಂಸ ಸೇವಿಸುತ್ತಿದ್ದರು ಹಾಗೂ ಪಾಕಿಸ್ತಾನದ ಸ್ಥಾಪಕ ಮೊಹಮ್ಮದ್ ಅಲಿ ಜಿನ್ನಾ ಹಂದಿ ಮಾಂಸ ಸೇವಿಸುತ್ತಿದ್ದರು ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದ್ದಾರೆ.

ಗಾಂಧಿ ಜಯಂತಿ ದಿನದಂದು ಗೂಡ್ಸೆ ಕುರಿತ ಪುಸ್ತಕವೊಂದರ ಬಿಡುಗಡೆ ಸಮಾರಂಭದಲ್ಲಿ ಮಾತನಾಡಿದ ಅವರು, ಸಾವರ್ಕರ್ ಚಿತ್ಪಾವನ ಬ್ರಾಹ್ಮಣರಾಗಿದ್ದರೂ ಸಹ ಮಾಂಸಾಹಾರಿಯಾಗಿದ್ದರು ಹಾಗೂ ಮಾಂಸಾಹಾರದ ಪ್ರತಿಪಾದಕರಾಗಿದ್ದರು. ಅವರು ಗೋಮಾಂಸವನ್ನು ತಿನ್ನುತ್ತಿದ್ದರು ಎಂದೂ ಹೇಳಲಾಗುತ್ತದೆ ಎಂದರು.

ಪಾಕಿಸ್ತಾನದ ಸ್ಥಾಪಕ ಮೊಹಮ್ಮದ್ ಅಲಿ ಜಿನ್ನಾ ವೈನ್ ಸೇವಿಸುತ್ತಿದ್ದರು ಹಾಗೂ ಬಹುಶಃ ಹಂದಿ ಮಾಂಸವನ್ನೂ ಸೇವಿಸಿದ್ದಾರೆ ಎಂದು ಜನರು ಹೇಳುತ್ತಾರೆ. ಅವರು ಮುಸ್ಲಿಮರ ತಾರೆಯಾದರು. ಆದರೆ, ಅವರು ಮೂಲಭೂತವಾದಿಯಾಗಿರಲಿಲ್ಲ. ಆದರೆ, ಸಾವರ್ಕರ್ ಮೂಲಭೂತವಾದಿ ಎಂದು ಗುಂಡೂರಾವ್ ಹೇಳಿದರು.

ತಮ್ಮ ಹೇಳಿಕೆಯನ್ನು ಸಮರ್ಥಿಸಿಕೊಂಡಿರುವ ಸಚಿವ ಗುಂಡೂರಾವ್, ಸಾವರ್ಕರ್ ಹಾಗೂ ಮಹಾತ್ಮ ಗಾಂಧೀಜಿ ತತ್ವಗಳ ನಡುವೆ ಇರುವ ವ್ಯತ್ಯಾಸವನ್ನು ವಿವರಿಸುತ್ತಿದ್ದೆ ಎಂದಿದ್ದಾರೆ. ಮಹಾತ್ಮ ಗಾಂಧಿ ಧಾರ್ಮಿಕ ವ್ಯಕ್ತಿಯಾಗಿದ್ದರು ಹಾಗೂ ಸಾವರ್ಕರ್ ನಿರೀಶ್ವರವಾದಿಯಾಗಿದ್ದರು. ಮಹಾತ್ಮ ಗಾಂಧಿ ಸಸ್ಯಾಹಾರಿಯಾಗಿದ್ದರು ಹಾಗೂ ಧರ್ಮದಲ್ಲಿ ನಂಬಿಕೆ ಇರಿಸಿದ್ದರು. ಸಾವರ್ಕರ್ ಮಾಂಸಾಹಾರಿ ಹಾಗೂ ಆಧುನಿಕವಾದಿಯಾಗಿದ್ದರು ಎಂದು ಗುಂಡೂರಾವ್ ಹೇಳಿದ್ದಾರೆ.

## ದಿನೇಶ್ ಗುಂಡೂರಾವ್ ಹೇಳಿಕೆಗೆ ಬಿಜೆಪಿ ಖಂಡನೆ

ನವದೆಹಲಿ, ಅ. 3 - ಕರ್ನಾಟಕ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರು ವೀರ ಸಾವರ್ಕರ್ ಕುರಿತು ನೀಡಿರುವ ಹೇಳಿಕೆಯನ್ನು ಬಿಜೆಪಿ ಖಂಡಿಸಿದೆ.

ಕಾಂಗ್ರೆಸ್ ನಾಯಕರು ಎಂದು ಕಾಲಾಪಾನಿ ಶಿಕ್ಷೆಯನ್ನು ಅನುಭವಿಸಿರಲಿಲ್ಲ. ಅವರು ಎರಡು ಜೀವಾವಧಿ ಶಿಕ್ಷೆಯನ್ನು ಕಾಲಾಪಾನಿಯಲ್ಲಿ ಅನುಭವಿಸಿದ್ದ ಸಾವರ್ಕರ್ ಟೀಕಿಸುತ್ತಿದ್ದಾರೆ ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ತರುಣ್ ಚುಗ್ ಹೇಳಿದ್ದಾರೆ.

ವೀರ ಸಾವರ್ಕರ್ ಅವರು ಕ್ರಾಂತಿಕಾರಿಗಳಿಗೆ ಸ್ಫೂರ್ತಿಯಾಗಿದ್ದರು. ಅವರನ್ನು ಅವಮಾನಿಸುವುದು ಎಂದರೆ ಚಂದ್ರನಿಗೆ ಉಗುಳಿದಂತೆ ಎಂದು ಚುಗ್ ಹೇಳಿದ್ದಾರೆ.

ಬಿಜೆಪಿ ರಾಷ್ಟ್ರೀಯ ವಕ್ತಾರ ಸುಧಾಂಶು ತ್ರಿವೇದಿ ಮಾತನಾಡಿ, ಎರಡು ಜೀವಾವಧಿ ಶಿಕ್ಷೆಗೆ ಗುರಿಯಾದ ಹಾಗೂ ಅಂಡಮಾನ್ ನಿಕೋಬಾರ್ ದ್ವೀಪದ ಜೈಲಿನಲ್ಲಿ ಇದ್ದ ಕಾಂಗ್ರೆಸ್ ನಾಯಕರ ಯಾರದಾದರೂ ಹೆಸರು ಹೇಳಲಿ? ಎಂದು ಸವಾಲು ಹಾಕಿದ್ದಾರೆ. ಸಾವರ್ಕರ್ ಅವರಿಗೆ ಜೀವಾವಧಿ ಶಿಕ್ಷೆಯಾದಾಗ ಬ್ರಿಟಿಷ್ ಅಧಿಕಾರಿ ವಿಲಿಯಂ ವೆಡರ್ ಬರ್ನ್ ಅವರು ಭಾರತ ರಾಷ್ಟ್ರೀಯ ಕಾಂಗ್ರೆಸ್ ಅಧ್ಯಕ್ಷರಾಗಿದ್ದರು. ಅವರು ಬ್ರಿಟಿಷ್ ಆಡಳಿತಾಧಿಕಾರಿಗಳ ಕಾಲ ಬಳಿ ಕುಳಿತಿದ್ದರು ಎಂದು ಹೇಳಿದರು.

# ಬಿಜೆಪಿಯಲ್ಲಿದ್ದುಕೊಂಡೇ ಸಿದ್ದರಾಮಯ್ಯ ಬಚಾವ್

(1ನೇ ಪುಟದಿಂದ) ಎಂದು ಪ್ರಶ್ನಿಸಿದ್ದಾರೆ.

ಯಡಿಯೂರಪ್ಪ ಅವರ ಮಗ ಎಂಬ ಕಾರಣಕ್ಕೆ ವಿಜಯೇಂದ್ರ ಅವರನ್ನು ಒಪ್ಪುವುದಿಲ್ಲ ಎನ್ನುತ್ತಾರೆ. ಯತ್ನಾಳರಲ್ಲೇ ಒಂದಷ್ಟು ಗೊಂದಲಗಳಿವೆ. ವಿಜಯೇಂದ್ರರನ್ನು ರಾಜ್ಯದ ಅಧ್ಯಕ್ಷರನ್ನಾಗಿ ಮಾಡುವ ಸಂದರ್ಭದಲ್ಲಿ ನಮ್ಮ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರು, ಕೇಂದ್ರ ಗೃಹ ಸಚಿವ ಅಮಿತ್ ಷಾ, ಪ್ರಧಾನಿ ನರೇಂದ್ರ ಮೋದಿ ಅವರ ಸಲಹೆ ಪಡೆದು ನೇಮಕ ಮಾಡಿದ್ದಾರೆ. ನೇಮಕ ಮಾಡುವಾಗ ರಾಜ್ಯ ಬಿಜೆಪಿ ಹಿರಿಯ ಮುಖಂಡರ, ಕಾರ್ಯಕರ್ತರ ಅಭಿಪ್ರಾಯವನ್ನೂ ಪಡೆದಿದ್ದಾರೆ.

ಯತ್ನಾಳ್ ತಂಡಕ್ಕೆ ಭಿನ್ನಾಭಿಪ್ರಾಯವಿದ್ದರೆ ದೆಹಲಿಗೆ ಹೋಗಿ ವರಿಷ್ಠರನ್ನು ಭೇಟಿ ಮಾಡಿ ಸಲಹೆ, ಸೂಚನೆ ಕೊಡಬೇಕು. ಸಮಸ್ಯೆಗಳನ್ನು ಚರ್ಚಿಸಬೇಕು. ಅದು ಬಿಟ್ಟು ರಸ್ತೆಯಲ್ಲಿ, ಹೋದಲ್ಲಿ-ಬಂದಲ್ಲಿ, ಯಾವ್ಯಾವುದೋ ಸಭೆಗೆ ಹೋದಾಗ ಮಾತನಾಡುವುದು ಸರಿಯಲ್ಲ. ಮುಡಾ ಹಗರಣದಲ್ಲಿ ಸಿಲುಕಿರುವ ಸಿದ್ದರಾಮಯ್ಯ ಪರ ಪರೋಕ್ಷವಾಗಿ ಮಾತನಾಡುವ ಮೂಲಕ ಬಿಜೆಪಿ ಹೋರಾಟದಲ್ಲಿ ಭಿನ್ನಮತ ಇದೆ ಎಂಬಂತೆ ಬಿಂಬಿಸಲು ಹೊರಟಿದ್ದಾರೆ. ಅವರಿಗೆ ಸಿದ್ದರಾಮಯ್ಯ ಅವರಿಗಿಂತ ವಿಜಯೇಂದ್ರ ಅವರೇ ಟಾರ್ಗೆಟ್ ಆಗಿದ್ದಾರೆ. ಇನ್ನು ಮುಂದಾದರೂ ಇದನ್ನು ಬಿಟ್ಟು ವರಿಷ್ಠರ ಸಲಹೆ, ಸೂಚನೆಗಳಂತೆ ನಡೆಯಲಿ.

ನಮಗೆ ವ್ಯಕ್ತಿಯಲ್ಲ, ಪಕ್ಷ ಮುಖ್ಯ ಎಂದಿರುವ ಬಣ, ಈ ಎಲ್ಲಾ ಬೆಳವಣಿಗೆಗಳನ್ನು ವರಿಷ್ಠರ ಗಮನಕ್ಕೆ ತಂದು ಕ್ರಮ ಕೈಗೊಳ್ಳುವಂತೆ ಒತ್ತಾಯಿಸಲು ನಿರ್ಧರಿಸಿದೆ.

# ಭಜನೆ ಮೂಲಕ ಗಾಂಧಿ ಜಯಂತಿ ಆಚರಿಸಿ ಗಮನ ಸೆಳೆದ ಉಪ ತಹಶೀಲ್ದಾರ್



ಮಲೇಬೆನ್ನೂರು, ಅ. 3- ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಅವರ ಸರಳತೆಯಂತೆ ಮತ್ತು ಅವರಿಗೆ ಇಷ್ಟವಾದ ಭಜನೆ ಕಾರ್ಯಕ್ರಮದ ಮೂಲಕ ಅವರ ಜಯಂತಿ ಆಚರಿಸುವ ಮೂಲಕ ಉಪ ತಹಶೀಲ್ದಾರ್ ಆರ್. ರವಿ ಎಲ್ಲರ ಗಮನ ಸೆಳೆದರು.

ಇಲ್ಲಿನ ನಾಡ ಕಛೇರಿಯಲ್ಲಿ ಬುಧವಾರ ಗಾಂಧೀಜಿ ಮತ್ತು ಶಾಸ್ತ್ರೀಜಿ ಅವರ ಜಯಂತಿ ಕಾರ್ಯಕ್ರಮವನ್ನು ಎಲ್ಲರೂ ನೆಲದ ಮೇಲೆ ಕುಳಿತು ಸಾಮೂಹಿಕ ಭಜನೆ ಮಾಡುವ ಮೂಲಕ ಆಚರಿಸಲಾಯಿತು.

ಆಶ್ರಯ ಕಾಲೋನಿಯ ಟಿ. ಗಜೇಂದ್ರಪ್ಪ ಅವರು ರಘುಪತಿ ರಾಘವ ರಾಜಾರಾಂ, ಪತಿತ ಪಾವನ ಸೀತಾರಾಮ್ ಸೇರಿದಂತೆ ಗಾಂಧೀಜಿ ಕುರಿತಾದ ಇತರೆ ಹಾಡುಗಳನ್ನು ಭಜನೆ ಮಾಡುತ್ತಾ ಹಾಡಿದರು. ಇವರಿಗೆ ಪುರಸಭೆ ಸದಸ್ಯ ಗೌಡ್ರ ಮಂಜಣ್ಣ, ಉಪ ತಹಶೀಲ್ದಾರ್ ಆರ್. ರವಿ, ಕಂದಾಯ ನಿರೀಕ್ಷಕ ಆನಂದ್, ಪತ್ರಕರ್ತರಾದ ನಟರಾಜ್, ಪ್ರಕಾಶ್, ರಮೇಶ್, ಸದಾನಂದ್, ಕಛೇರಿ ಸಿಬ್ಬಂದಿಗಳಾದ ರಾಣಿ ಎಲಿಜಬೆತ್, ಬಸವರಾಜ್, ಶಿಲ್ಪಾ, ಗ್ರಾಮ ಸಹಯಕರಾದ ಜಿಗಳಿ ರಂಗಸ್ವಾಮಿ, ಹಾಲಿವಾಣದ ಸಂತೋಷ್, ಕುಂಬಳೂರಿನ ಮಾರುತಿ, ಪೋಸ್ಟ್ ಮಾರುತಿ, ಜೈ ಮಾರುತಿ ಮತ್ತಿತರರು ಸಾಥ್ ನೀಡಿದರು.

# ಕೆ.ಎನ್. ಹಳ್ಳಿ ಬಳಿ ಸಿಡಿಲಿಗೆ ಮೇಕೆಗಳು ಬಲಿ



ಮಲೇಬೆನ್ನೂರು, ಅ.3- ಸಿಡಿಲು ಬಡಿದು 8 ಮೇಕೆಗಳು ಸಾವನ್ನಪ್ಪಿರುವ ಘಟನೆ ಗುರುವಾರ ಸಾಯಂಕಾಲ ಕಡರನಾಯ್ಕನಹಳ್ಳಿ ಗ್ರಾಮದ ಬಳಿ ಹೊಲದಲ್ಲಿ ನಡೆದಿದೆ. ಘಟನೆಯಲ್ಲಿ 3 ಮೇಕೆಗಳ ಕಣ್ಣುಗಳಿಗೆ ಹಾನಿಯಾಗಿ ನಿತ್ರಾಣ ಸ್ಥಿತಿಯಲ್ಲಿವೆ ಎನ್ನಲಾಗಿದೆ. ಘಟನೆ ವೇಳೆ ಮೇಕೆ ಮೇಯಿಸುತ್ತಿದ್ದ ಗ್ರಾಮದ ಮರಿಯಪ್ಪ ಎಂಬಾತನ ಕಾಲಿಗೆ ಝಳ ತಾಕಿದ್ದು ಆತ ಗಾಬರಿಗೊಂಡಿದ್ದಾನೆ.

ಒಟ್ಟು 15 ಮೇಕೆಗಳನ್ನು ಸಾಕಿದ್ದ ಮರಿಯಪ್ಪ ಈ ಘಟನೆಯಿಂದಾಗಿ ತೀವ್ರ ಆಘಾತಕ್ಕೊಳಗಾಗಿದ್ದಾನೆ. ಗುರುವಾರ ಸಾಯಂಕಾಲ ಗುಡುಗು, ಸಿಡಿಲು ಸಹಿತ ಮಳೆ ಸುರಿದಾಗ ಈ ಘಟನೆ ನಡೆದಿದೆ.

ವಿಷಯ ತಿಳಿದ ತಕ್ಷಣ ಕೆ.ಎನ್. ಹಳ್ಳಿ ಗ್ರಾಮಸ್ಥರು ಸ್ಥಳಕ್ಕೆ ತೆರಳಿ ಮರಿಯಪ್ಪನನ್ನು ಆಸ್ಪತ್ರೆಗೆ ಕರೆತಂದಿದ್ದಾರೆ. ಕಂದಾಯ ನಿರೀಕ್ಷಕ ಆನಂದ್ ಮತ್ತು ಗ್ರಾ ಪಂ ಪಿಡಿಓ ಅವರು ಸ್ಥಳಕ್ಕೆ ಭೇಟಿ ಪರಿಶೀಲಿಸಿದರು.

# ಮುಡಾದಲ್ಲಿ ಸಾಕ್ಷಿನಾಶ : ದೂರು

**ಇಡಿಗೆ ದೂರು ಸಲ್ಲಿಸಿದ ಪ್ರಕರಣದ ದೂರುದಾರ ಎಸ್.ಪಿ. ಪ್ರದೀಪ್**

ಬೆಂಗಳೂರು, ಅ. 3 - ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಇತರರು ಮುಡಾ ಪ್ರಕರಣದ ಸಾಕ್ಷಿ ನಾಶದಲ್ಲಿ ತೊಡಗಿದ್ದಾರೆ ಎಂದು ಪ್ರಕರಣದ ದೂರುದಾರ ಎಸ್.ಪಿ. ಪ್ರದೀಪ್ ಕುಮಾರ್ ಅವರು ಆರೋಪಿಸಿದ್ದು, ಈ ಬಗ್ಗೆ ಕ್ರಮ ತೆಗೆದುಕೊಳ್ಳುವಂತೆ ಜಾರಿ ನಿರ್ದೇಶನಾಲಯಕ್ಕೆ ಮನವಿ ಸಲ್ಲಿಸಿದ್ದಾರೆ.

ಮುಡಾ ಪ್ರಕರಣಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತಿತರರ ವಿರುದ್ಧ ಲೋಕಾಯುಕ್ತ ಪೊಲೀಸರು ಸೆಪ್ಟೆಂಬರ್ 27ರಂದು ಎಫ್.ಐ.ಆರ್. ದಾಖಲಿಸಿದ್ದರು. ಇದಾದ ನಂತರ ಜಾರಿ ನಿರ್ದೇಶನಾಲಯ ಸಹ ಇದೇ ಪ್ರಕರಣಕ್ಕೆ ಸಂಬಂಧಿಸಿದಂತೆ ಇ.ಸಿ.ಐ.ಆರ್. ದಾಖಲಿಸಿತ್ತು.

ಆನಂತರದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿ ಪಾರ್ವತಿ ಅವರು ಮುಡಾದಿಂದ ಪಡೆದಿದ್ದ 14 ನಿವೇಶನಗಳನ್ನು ವಾಪಸ್ ನೀಡಿದ್ದರು. ಈ ನಿವೇಶನಗಳ ಸೇಲ್ ಡೀಡ್ ರದ್ದುಗೊಳಿಸಲು ಮೂಡ ಆಯುಕ್ತ ಎ.ಎನ್. ರಘುನಂದನ್ ಕ್ರಮ ತೆಗೆದುಕೊಂಡಿದ್ದರು.

ಈ ಹಿನ್ನೆಲೆಯಲ್ಲಿ ಜಾರಿ ನಿರ್ದೇಶನಾಲಯಕ್ಕೆ ಪತ್ರ ಬರೆದಿರುವ ಕುಮಾರ್, ನ್ಯಾಯಾಲಯದ ಅನುಮತಿ ಇಲ್ಲದೆ ಆಸ್ತಿಗಳ ಸ್ಥಿತಿ ಬದಲಿಸುವಂತಿಲ್ಲ ಎಂದಿದ್ದಾರೆ.

ಈ ಪ್ರಕರಣದ ಆರೋಪಿ ಸಿದ್ದರಾಮಯ್ಯ ಅವರನ್ನು ತಕ್ಷಣವೇ ಬಂಧಿಸಬೇಕು. ಇಲ್ಲವಾದಲ್ಲಿ ಇಡೀ ಪ್ರಕರಣದ ಸಾಕ್ಷಿಗಳು ನಾಶವಾಗಲಿವೆ. ಮುಖ್ಯಮಂತ್ರಿ ಹಾಗೂ ಇತರರ ವಿರುದ್ಧ ಸಾಕ್ಷಿ ನಾಶದ ಪ್ರಕರಣ ದಾಖಲಿಸಬೇಕು ಎಂದು ಮನವಿಯಲ್ಲಿ ಕೋರಲಾಗಿದೆ.

ಪಾರ್ವತಿಯವರು ಮುಡಾ ಅಪರಾಧದಿಂದ ದೊರೆತ ನಿವೇಶನಗಳನ್ನು ವಾಪಸ್ ನೀಡಲು ಮುಂದಾಗಿದ್ದರು. ಮುಡಾ ಸಹ 14 ನಿವೇಶನಗಳನ್ನು ವಾಪಸ್ ಪಡೆದು ದಾಖಲೆಗಳನ್ನು ಬದಲಿಸಿದೆ. ಇದು ತನಿಖೆಯಲ್ಲಿ ಗಂಭೀರ ಮಧ್ಯಪ್ರವೇಶ. ತನಿಖೆಯನ್ನು ನಿಷ್ಕ್ರಿಯಗೊಳಿಸಲು ಈ ರೀತಿಯ ಕ್ರಮ ತೆಗೆದುಕೊಳ್ಳಲಾಗುತ್ತಿದೆ ಎಂದು ದೂರಿನಲ್ಲಿ ಆರೋಪಿಸಲಾಗಿದೆ.

ಅಪರಾಧಕ್ಕೆ ಸಂಬಂಧಿಸಿದ ದಾಖಲೆಗಳನ್ನು ಬದಲಿಸಿದ ಹಿನ್ನೆಲೆಯಲ್ಲಿ ಮುಡಾ ಆಯುಕ್ತರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು. ಈ ವಿಷಯದಲ್ಲಿ ಮುಖ್ಯಮಂತ್ರಿ ಕಚೇರಿ ಇಲ್ಲವೇ ಸ್ವತಃ ಮುಖ್ಯಮಂತ್ರಿಗಳೇ ಮಧ್ಯಪ್ರವೇಶಿಸಿ ಒತ್ತಡ ಹೇರಿದ್ದರೇ? ಎಂಬ ಬಗ್ಗೆಯೂ ತನಿಖೆ ನಡೆಸಬೇಕು ಎಂದು ಪ್ರದೀಪ್ ಕುಮಾರ್ ಮನವಿಯಲ್ಲಿ ಹೇಳಿದ್ದಾರೆ.

# ಈಶ್ವರ ಪಾರ್ವತಿ ಗಣಪತಿ ದೇವಸ್ಥಾನದಲ್ಲಿ ಶ್ರೀದೇವಿ ಪುರಾಣ



ದಾವಣಗೆರೆ, ಅ.3- ವಿದ್ಯಾನಗರದ ಶ್ರೀ ಈಶ್ವರ ಪಾರ್ವತಿ ಗಣಪತಿ ದೇವಸ್ಥಾನದಲ್ಲಿ ನವರಾತ್ರಿ ಅಂಗವಾಗಿ ಶ್ರೀದೇವಿ ಪುರಾಣವನ್ನು ದೇವಸ್ಥಾನದ ಅಧ್ಯಕ್ಷರಾದ ಶ್ರೀ ಬೆಳವನುರು ನಾಗರಾಜಪ್ಪನವರು ಉದ್ಘಾಟಿಸಿದರು ಅಮರಯ್ಯ ಶಾಸ್ತ್ರಿ ಲೋಟಗೇರಿ ಶರಣಯ್ಯ ಗವಾಯಿಗಳು ಚೆನ್ನಮಗೇರಿ ಡಾ. ಮಂಜುನಾಥ್ ಕುರ್ಕಿ ಪ್ರಭುದೇವ್ ಬೆಳವನೂರ್ ಗುರುಸ್ವಾಮಿ ಹಾಗೂ ದೇವಸ್ಥಾನದ ಮಹಿಳಾ ಭಜನಾ ಸಂಘದ ಸದಸ್ಯರು ಉಪಸ್ಥಿತರಿದ್ದರು

# ಕೃಷಿ ಯೋಜನೆಗಳು ವಿಲೀನ : 1 ಲಕ್ಷ ಕೋಟಿ ಅನುದಾನ

(1ನೇ ಪುಟದಿಂದ) ತಿಳಿಸಲಾಗಿದೆ. ಪಿಎಂ ರಾಷ್ಟ್ರೀಯ ಕೃಷಿ ವಿಕಾಸ್ ಯೋಜನೆ (ಪಿಎ-ಆರ್.ಕೆ.ವಿ.ವೈ.) ಯೋಜನೆ ಮೂಲಕ ಕೃಷಿಗೆ ಉತ್ತೇಜನ ನೀಡಲಾಗುವುದು. ಕೃಷಿ ಉನ್ನತಿ ಯೋಜನೆ (ಕೆ.ವೈ.) ಮೂಲಕ ಆಹಾರ ಸುರಕ್ಷತೆ ದಿಸೆಯಲ್ಲಿ ಕ್ರಮ ತೆಗೆದುಕೊಳ್ಳಲಾಗುವುದು. ಈ ಎರಡು ಯೋಜನೆಗಳಿಗೆ 1.01 ಲಕ್ಷ ಕೋಟಿ ರೂ. ವೆಚ್ಚ ಮಾಡುವ ಗುರಿ ಇದೆ. ಈ ಯೋಜನೆಗಳಲ್ಲಿ ಕೇಂದ್ರದ ಪಾಲು 69,088 ಕೋಟಿ ರೂ. ಹಾಗೂ ರಾಜ್ಯಗಳ ಪಾಲು 32,232 ಕೋಟಿ ರೂ. ಆಗಿರಲಿದೆ. ಈ ಹಿಂದೆ ಇದ್ದ 18 ಯೋಜನೆಗಳನ್ನು ಒಗ್ಗೂಡಿಸಿ ಎರಡು ಯೋಜನೆಗಳಾಗಿ ಪರಿವರ್ತಿಸಲಾಗಿದೆ.


**2400 Sq.ft FOR RENT TO OFFICE**
2nd Floor, Old ZILLA KHAZANA, Backside Hadai Road, 3rd Main, 14th Cross Corner Building, Davanagere-577002.
99029 99359

**ಬೆಳ್ಳಿ ಫೋಟೋಗಳು ದೊರೆಯುತ್ತವೆ**
ಮದುವೆ, ಗೃಹಪ್ರವೇಶ ಇತ್ಯಾದಿ ಸಮಾರಂಭಗಳಿಗೆ ಬೆಳ್ಳಿ ದೇವರ ಮೂರ್ತಿಗಳ ಫೋಟೋಗಳು ದೊರೆಯುತ್ತವೆ. ಗಣೇಶ, ಬಾಲಾಜಿ, ಲಕ್ಷ್ಮಿ, ಸರಸ್ವತಿ, ಅನ್ನಪೂರ್ಣೇಶ್ವರಿ, ಸತ್ಯನಾರಾಯಣ ಸ್ವಾಮಿ, ಧರ್ಮಸ್ಥಳ ಮಂಜುನಾಥ ಸ್ವಾಮಿ, ಶಿವ ಪಾರ್ವತಿ, ಮಂತ್ರಾಲಯ ರಾಘವೇಂದ್ರ ಸ್ವಾಮಿ, ಆಂಜನೇಯ ಸ್ವಾಮಿ, ಶಿರಡಿ ಸಾಯಿಬಾಬಾ, ಈಶ್ವರ ಲಿಂಗ, ಮೈಲಾರ ಲಿಂಗೇಶ್ವರ, ವೀರಭದ್ರ ಸ್ವಾಮಿ, ಚಾಮುಂಡೇಶ್ವರಿ, ರೇಣುಕಾ ಯಲ್ಲಮ್ಮ, ಗುರು ಕೊಟ್ಟೂರೇಶ್ವರ ಸ್ವಾಮಿ, ನಾಯಕನಹಟ್ಟಿ ತಿಪ್ಪೇಸ್ವಾಮಿ, ಮರುಳಸಿದ್ಧೇಶ್ವರ ಸ್ವಾಮಿ ಸಣ್ಣ ಪ್ಯೂರ್ ಬೆಳ್ಳಿ ಫೋಟೋಗಳು ರೂ. 160 ರಿಂದ 260 ರೂ.ಗಳಿಗೆ ಸಿಗುತ್ತವೆ. ಅಂಗಡಿ ಪ್ರಾರಂಭಿಸಲು ಪೂಜೆ ಮಾಡುವ ವೈಟ್ ಮೆಟಲ್‌ನ ಸರ್ವಾಲಂಕಾರದ (ಲೈಟಿಂಗ್) ಫೋಟೋಗಳು ದೊರೆಯುತ್ತವೆ. ಮದುವೆ ಇತ್ಯಾದಿ ಸಮಾರಂಭಗಳಿಗೆ 1 ಗ್ರಾಂ. ಗೋಲ್ಡ್‌ನಲ್ಲಿ ತಾಟು, ಬಿಂಕಿ, ಹಾರಗಳು ಸಿಗುತ್ತವೆ ಮತ್ತು ಅನುಕೂಲಕರವಾದ ಗಿಫ್ಟ್‌ಗಳಿವೆ.
ಸ್ಥಳ : ಲಕ್ಷ್ಮೀ ಬಾಲಾಜಿ ಸಿಲ್ವರ್ ಫೋಟೋ ಫ್ರೇಮ್ಸ್
ಮಳಿಗೆ ನಂ. 34, ಶ್ರೀ ಮುರುಘರಾಜೇಂದ್ರ ಕಾಂಪ್ಲೆಕ್ಸ್, ಶಿವಪ್ಪಯ್ಯ ವೃತ್ತದ ಹತ್ತಿರ, ದಾವಣಗೆರೆ.
ಮೊ. : 99451 59582

**ಸೈಟುಗಳು ಮಾರಾಟಕ್ಕಿವೆ**
SS 'A' Block ದಕ್ಷಿಣ 30x49 ಕೆ.ಬಿ. ಬಡಾವಣೆ, ಲಾಯರ್ ರಸ್ತೆ ಹತ್ತಿರ ದಕ್ಷಿಣ 40x40 ವಿದ್ಯಾನಗರ ಪಶ್ಚಿಮ 50x32 ಹಳೆ ಬನಶಂಕರಿ ಪೂರ್ವ+ಪಶ್ಚಿಮ 40x60 ಹಿಂದೆ-ಮುಂದೆ (4 ಸೈಟುಗಳು)
ಐಗೂರು ವಿಜಯಕುಮಾರ
99457 02495

**ಖರೀದಿ & ಮಾರಾಟಕ್ಕೆ**
ಡಾಲರ್ಸ್ ಕಾಲೋನಿ, 30x60 ಪೂರ್ವಕ್ಕೆ (ಸೆಮಿ ಕಮರ್ಷಿಯಲ್). ಜಗಳೂರು ಮೇನ್ ರೋಡ್, ರಾಂಪುರದ ಹತ್ತಿರ 30 ಗುಂಟೆ ಜಮೀನು ಮಾರಾಟಕ್ಕಿದೆ.
ಸುರೇಶ್, 95911 60520

**ಸೈಟುಗಳು ಮಾರಾಟಕ್ಕಿವೆ**
ವಾಜಪೇಯಿ ಲೇ ಔಟ್, ಡಾಲರ್ಸ್ ಕಾಲೋನಿ, ಕೆಹೆಚ್‌ಬಿ, ನಂದಿನಿ ಲೇ ಔಟ್, ಬನಶಂಕರಿ ಬಡಾವಣೆ, ಶಕ್ತಿನಗರ, ವಿಶ್ವಚೇತನ ಸ್ಕೂಲ್ ಹತ್ತಿರ, 40x60, 50x50, 30x50, 30x40 ಸೈಟುಗಳು ದೊರೆಯುತ್ತವೆ
95385 65909

**ಮಳಿಗೆ ಬಾಡಿಗೆಗೆ ಇದೆ**
ದಾವಣಗೆರೆ ಪಿಬಿ ರಸ್ತೆ, FIRE ಇಂಜಿನ್ ಆಫೀಸ್ ಪಕ್ಕ, KSRTC ಹತ್ತಿರ, ಎಪಿಎಂಸಿ ಕ್ವಾರ್ಟರ್ಸ್ ಗೆ ಹೊಂದಿಕೊಂಡಿರುವ, 24×28 ಅಳತೆಯ ಮಳಿಗೆ
97436 18723

**ಬೇಕಾಗಿದ್ದಾರೆ**
ವೆಯ್ಟರ್ಸ್, ಕ್ಯಾಪ್ಟನ್, ಬಿಲ್ಲಿಂಗ್, ಕೌಂಟರ್ ಸೇಲ್ಸ್ ಬೇಕಾಗಿದ್ದಾರೆ. ಪಾರ್ಟ್‌ಟೈಂ, ಫುಲ್‌ಟೈಂ
ಹೋಟೆಲ್ ಪುಡ್ಡೀಸ್
ಚರ್ಚ್ ರೋಡ್, ತೊಗಟವೀರ ಕಲ್ಯಾಣ ಮಂಟಪದ ಹತ್ತಿರ, ದಾವಣಗೆರೆ.
98861 56688

**ಸೈಟುಗಳು ಮಾರಾಟಕ್ಕಿವೆ**
KHB ಲೇಔಟ್ ಉತ್ತರ 50x80 ಡಬಲ್ ರಸ್ತೆ (ಜಡ್ಜ್ ಮನೆ ಹತ್ತಿರ) ಹೊಸ ಬನಶಂಕರಿ ಪೂರ್ವ 30x40, ಜೆ. ಹೆಚ್. ಪಟೇಲ್ ಬಡಾವಣೆ ಪೂರ್ವ 40x60, ಶಿವ-ಪಾರ್ವತಿ ಬಡಾವಣೆ ಪೂರ್ವ 40x60
ಐಗೂರು ವಿಜಯಕುಮಾರ
99457 02495

**ಕೆಲಸಕ್ಕೆ ಬೇಕಾಗಿದ್ದಾರೆ**
ಆಸ್ಪತ್ರೆಯಲ್ಲಿನ ಕೆಲಸ
ಅಡುಗೆ ಕೆಲಸ - 01
ನೇರ ಸಂದರ್ಶನಕ್ಕೆ ಸಂಪರ್ಕಿಸಿ:
86186 42929, 08192 252228

**WANTED**
Office boy SSLC
Gaurav Communications, Davangere
94487 28866
93799 06688

**ಅಡಿಕೆ ತೋಟ ಮಾರಾಟಕ್ಕಿದೆ**
ದಾವಣಗೆರೆಯಿಂದ 10 ಕೆ.ಮೀ. ಹತ್ತಿರವಿರುವ 5 ಎಕರೆ 2 ವರ್ಷದ ಅಡಿಕೆ ತೋಟ, 3 ಬೋರ್‌ವೆಲ್ ಮತ್ತು ಚಾನಲ್ ನೀರಿನ ವ್ಯವಸ್ಥೆಯಿದೆ. ಪ್ರತಿ ಎಕರೆಗೆ 50 ಲಕ್ಷ ರೂ. ಜೀನಿಯಸ್ ಸ್ಕೂಲ್ ಹತ್ತಿರ, ಹಿರೇತೊಗಲೇರಿ.
82172 37969, 97413 48103

**ಮನೆ ಬಾಡಿಗೆಗೆ ಇದೆ**
ಎಂಸಿಸಿ 'ಬಿ' ಬ್ಲಾಕ್ 6ನೇ ಕ್ರಾಸ್, ಕುವೆಂಪು ನಗರ, ದಾವಣಗೆರೆ, 2BHK ರೂಮ್ ಮುನ್ಸಿಪಲ್ ನೀರು & ಬೋರ್‌ವೆಲ್ ಕಾರ್ ಪಾರ್ಕಿಂಗ್ ಸೌಲಭ್ಯವಿರುತ್ತದೆ.
94811 61164
99011 56603

**ಮತ್ಸ್ಯದ ಮನೆ**
ಮನೆಯಲ್ಲಿ ಬಾಳೆ ಎಲೆ ಮೀನಿನ ಊಟ.
95133 14666
ಪಿಸಾಳೆ ಕಾಪೌಂಡ್, ದಾವಣಗೆರೆ

**ಕಾರ್ ಡ್ರೈವರ್ ಬೇಕಾಗಿದ್ದಾರೆ**
ಪುಣೆಯಲ್ಲಿ ಅನುಭವವಿರುವ ಕಾರ್ ಡ್ರೈವರ್ ಬೇಕಾಗಿದ್ದಾರೆ.
ಸಂಪರ್ಕಿಸಿ :
99728 25666

**WANTED**
SALESMEN
South India Opticals Near Ram And Co Circle, Beside Bank of Baroda, Davangere.
94481 91432

**JOB OPPORTUNITY**
Female Office Assistant
Good In Office Work-Computer Skills Good In Customer Dealing Freshers can also apply B.Com., M.Com., & MBA
Cor Contact :
97312 18567
Send C.V-hardsoftdvg@gmail.com

**ಬೇಕಾಗಿದ್ದಾರೆ**
ಆಟೋಮೊಬೈಲ್ ಅಂಗಡಿ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ಪಿ.ಬಿ. ರೋಡ್, ದಾವಣಗೆರೆ. ಸಂಪರ್ಕಿಸಿ :
89048 09492

**ಸಂಘ-ಸಂಸ್ಥೆಗಳ, ಟ್ರಸ್ಟ್‌ಗಳ ಫೈನಾನ್ಸ್,**
GST & Income tax, ನೋಂದಣಿ, ನವೀಕರಣ ಆಡಿಟ್ ಮಾಡಿಕೊಡುತ್ತೇವೆ.
94838 62779

**ಮನೆಗಳು ಬಾಡಿಗೆ / ಲೀಸ್‌ಗಿವೆ**
2BHK ಆರ್ ಸಿ ಸಿ 2ನೇ ಮಹಡಿ ಲೀಸ್ 5 ಲಕ್ಷ, ಪೂರ್ವ ಬಾಗಿಲು, 2BHK ಆರ್.ಸಿ.ಸಿ. ಬಾಡಿಗೆ 5,500/- ದೇವರಾಜ್ ಅರಸ್ ಬಡಾವಣೆ, ದಾವಣಗೆರೆ. ಬೋರ್ ವೆಲ್/ಕಾರ್ಪೊರೇಷನ್ ನೀರು, ಕಾರ್ ಪಾರ್ಕಿಂಗ್ ಸೌಲಭ್ಯವಿದೆ. 1BHK ಆರ್.ಸಿ.ಸಿ. ನಿಟುವಳ್ಳಿ, ಲೆನಿನ್ ನಗರ, ಲೀಸ್ 2 ಲಕ್ಷ.
9741746205, 7349397287

**TUITIONS**
ಗುರುದತ್ತ ಬಿ. ನಾಡಿಗೇರ್
Class 6 ಇಂದ Class 10
CBSE / ICSE Boards, NEET / IIT - JEE / Olympiads
Memory Techniques + Hand Writing
97398 65711, 94822 44114

**TUITIONS**
ಗುರುದತ್ತ ಬಿ. ನಾಡಿಗೇರ್
PUC I / PUC II / Longterm / PCMB
NEET / IIT - JEE / KCET / CLAT - Printed Notes + Study Materials
97398 65711, 94822 44114

**HOUSE FOR LEASE**
2 BHK (G.F) & 4 BHK (First Floor) # 791/3-191 Jayanagara `A' Block, Davanagere. (Solar Facility Available)
99805 70842, 94489 65819

**ಕಂಪ್ಯೂಟರ್ ಟೈಪಿಸ್ಟ್ ಬೇಕಾಗಿದ್ದಾರೆ**
ಕಂಪ್ಯೂಟರ್‌ನಲ್ಲಿ ಇಂಗ್ಲಿಷ್ ಹಾಗೂ ಕನ್ನಡ ಟೈಪ್ ಮಾಡಲು ಪುರುಷ/ಮಹಿಳೆ ಬೇಕಾಗಿದ್ದಾರೆ. ಕೆಲಸದ ಸಮಯ ಬೆಳಗ್ಗೆ 8 ರಿಂದ 10 ಗಂಟೆವರೆಗೆ (2 ಗಂಟೆ ಮಾತ್ರ)
ಚನ್ನಗಿರಿ ವಿರೂಪಾಕ್ಷಪ್ಪ ಧರ್ಮಶಾಲಾ ಟ್ರಸ್ಟ್ (ರಿ.), ಚನ್ನಗಿರಿ ರಂಗಪ್ಪ ಗಡಿಯಾರ ಕಂಬದ ಎದುರು, ರೈಲ್ವೆ ಸ್ಟೇಷನ್ ರಸ್ತೆ, ದಾವಣಗೆರೆ - 1.
94481 10895

ಶ್ರೀ ಗುರು ಶಾಂತವೀರೇಶ್ವರ ಸೇವಾ ಸಮಿತಿ (ರಿ.)
**ವೀರಶೈವ/ಲಿಂಗಾಯತ ವಧು-ವರರ ಅನ್ವೇಷಣಾ ಕೇಂದ್ರ**
(ಕಳೆದ 21ನೇ ವರ್ಷಗಳ ಸೇವೆಯಲ್ಲಿ)
ದಾವಣಗೆರೆ, ಶಿವಮೊಗ್ಗ, ಸಾಗರ, ಬೆಂಗಳೂರು ಹಾಗೂ 10 ಶಾಖಾ ಕಛೇರಿ ಹೊಂದಿರುವ ನಮ್ಮಲ್ಲಿ ಎಲ್ಲಾ ತರಹದ ವೀರಶೈವ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಸಿದ್ದವೀರಪ್ಪ ಬಡಾವಣೆ, ದಾವಣಗೆರೆ.
ಮೊ: 94481 59303, 80509 52637

**CHANGE OF NAME**
SHABEENA ZAHEERUDDIN (old name) w/o MOHAMMED MUNAF Resident of # 307 5th cross, Bhasha nagar, Davangere, Davangere Dist. Karnataka Has Changed my name as SHABEENA KOUSAR Vide affidavit dated 03.10.2024 sworn before Notary. I.P. Brahmakumar, Davangere. Henceforth all my transactions and dealings will be in my new name SHABEENA KOUSAR
Sd/- SHABEENA KOUSAR

**LEARN PROGRAMMING**
`C' Language, OOP'S with C++
Niyam Computers
PJ Extn. Davanagere
Call for more Info :
90367 19573

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ।। ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**WANTED**
* Marketing Executive
* Graphic Designer
* Video editor
* Sale manager
Send your Resume to Whatsapp No.
99019 11421

**SSLC/ PUC ಪರೀಕ್ಷೆಯಲ್ಲಿ ಮತ್ತು ಅವಕಾಶ ವಂಚಿತ ವಿದ್ಯಾರ್ಥಿಗಳಿಗೆ ಸುವರ್ಣಾವಕಾಶ**
ದೂರ ಶಿಕ್ಷಣದ ಮುಖಾಂತರ ಆನ್‌ಲೈನ್ ಪರೀಕ್ಷೆ ಮುಖಾಂತರ ಉತ್ತಮ ಫಲಿತಾಂಶಕ್ಕಾಗಿ ಮುಂದಿನ ವಿದ್ಯಾಭ್ಯಾಸ ಮುಂದುವರಿಸಲು/ಸರ್ಕಾರಿ/ಖಾಸಗಿ ಉದ್ಯೋಗಾವಕಾಶ ಪಡೆಯಬಹುದಾದ ಕರ್ನಾಟಕ ಸರ್ಕಾರದ ಪ.ಪೂ. ಮಾರ್ಗಸೂಚಿ ಪಟ್ಟಿಯಲ್ಲಿ (ಸಿಬಿಎಸ್‌ಇ) ಅನುಮೋದಿತಗೊಂಡಿದೆ.
BOSSE-SIKKIM (ಪ್ರವೇಶ ಪ್ರಾರಂಭವಾಗಿದೆ)
SHREYAS CORRESPONDENCE COLLEGE, DCM TownShip, Davangere.
97317 40827, 83107 47112, 97432 20274

**HOUSE FOR LEASE / RENT**
2 BHK- 30x50, 2nd floor 5th cross, Mahalakshmi Badavane, Behind Kaveri Apartment, Davanagere.
99809 33002

# ನವರಾತ್ರಿ ಉತ್ಸವ : ನಗರದ ವಿವಿಧ ದೇವಸ್ಥಾನಗಳಲ್ಲಿ ವಿಶೇಷ ಅಲಂಕಾರ


ಜಯದೇವ ವೃತ್ತ ಶ್ರೀ ಶಂಕರ ಮಠ ಶ್ರೀ ಶಾರದಾ ಶರನ್ನವರಾತ್ರ್ಯುತ್ಸವ ಪ್ರಯುಕ್ತ ಶೈಲಪುತ್ರಿ ಆರಾಧನೆ


ದಾವಲ್‌ಪೇಟೆ ಶ್ರೀ ಚೌಡೇಶ್ವರಿ ದೇವಿಗೆ ಅರಿಶಿಣ, ಕುಂಕುಮ ಅಲಂಕಾರ


ನಿಜಲಿಂಗಪ್ಪ ಬಡಾವಣೆಯ ಶ್ರೀ ಶಾರದಾ ಪರಮೇಶ್ವರಿಗೆ ಈ ದಿನದ ಹಂಸವಾಹನ ಅಲಂಕಾರ


ಶ್ರೀ ಕಾಳಿಕಾದೇವಿ ವಿಶ್ವಕರ್ಮ ದೇವಸ್ಥಾನದಲ್ಲಿ ಶ್ರೀದೇವಿಗೆ ಅರಿಶಿಣ ಅಲಂಕಾರ


ಎಸ್‌ಕೆಪಿ ರಸ್ತೆಯ ಕನ್ನಿಕಾ ಪರಮೇಶ್ವರಿ ದೇವಸ್ಥಾನದಲ್ಲಿ ಕನ್ನಿಕಾಪರಮೇಶ್ವರಿ ಅಮ್ಮನವರಿಗೆ ಬ್ರಾಹ್ಮೀದೇವಿ ಅಲಂಕಾರ


ಕೆಟಿಜೆ ನಗರ 9ನೇ ತಿರುವಿನಲ್ಲಿರುವ ಶ್ರೀ ತುಳಜಾಭವಾನಿ ದೇವಸ್ಥಾನದಲ್ಲಿ ಶ್ರೀ ದೇವಿಗೆ ವಿಶೇಷ ಅಲಂಕಾರ


ಎಸ್ ಓ ಜಿ ಕಾಲೋನಿಯ ಕರ್ಮಫಲದಾತ ಶ್ರೀ ಶನೈಶ್ಚರ ಸ್ವಾಮಿಯ ಸನ್ನಿಧಿಯಲ್ಲಿ ಶ್ರೀ ಚೌಡೇಶ್ವರಿ ಅಮ್ಮನವರಿಗೆ ವಿಶೇಷ ಅಲಂಕಾರ


ಶಾಮನೂರಿನ ಶ್ರೀ ಮಂಗಳಗೌರಿ ದೇವಸ್ಥಾನದಲ್ಲಿ ಶ್ರೀ ದೇವಿಗೆ 1ನೇ ದಿನದ ಶೈಲಾಪುತ್ರಿ ಅಲಂಕಾರ.

## ಹಿಂದೂ ಮಹಾಸಭಾದಿಂದ ನಾಳೆ ಶೋಭಯಾತ್ರೆ, ಇಂದು ಬೈಕ್ ರ್‍ಯಾಲಿ

ದಾವಣಗೆರೆ, ಅ. 3- ಸಾರ್ವಜನಿಕ ಹಿಂದೂ ಮಹಾ ಗಣಪತಿ ಟ್ರಸ್ಟ್ ವತಿಯಿಂದ ಬಾಲಕರ ಸರ್ಕಾರಿ ಪ್ರೌಢಶಾಲಾ ಮೈದಾನದಲ್ಲಿ ಪ್ರತಿಷ್ಠಾಪಿಸಲ್ಪಟ್ಟಿರುವ ಗಣೇಶಮೂರ್ತಿ ವಿಸರ್ಜನೆ ನಾಡಿದ್ದು ದಿನಾಂಕ 5 ರಂದು ನಡೆಯಲಿದ್ದು, ಇದರ ಅಂಗವಾಗಿ ನಾಳೆ ದಿನಾಂಕ 4 ರಂದು ಬೆಳಿಗ್ಗೆ 11 ಗಂಟೆಗೆ ಬೃಹತ್ ಬೈಕ್ ರ್‍ಯಾಲಿ ಹಮ್ಮಿಕೊಳ್ಳಲಾಗಿದೆ ಎಂದು ಟ್ರಸ್ಟ್ ಅಧ್ಯಕ್ಷ ಜೊಳ್ಳಿ ಗುರು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಗಣೇಶ್ ಮೂರ್ತಿ ವಿಸರ್ಜನೆ ಮೆರವಣಿಗೆ ಹಿನ್ನೆಲೆಯಲ್ಲಿ ಹಮ್ಮಿಕೊಂಡಿರುವ ಬೈಕ್ ರ್‍ಯಾಲಿ ಬಾಲಕರ ಸರ್ಕಾರಿ ಪ್ರೌಢಶಾಲಾ ಮೈದಾನ ದಿಂದ ಆರಂಭಗೊಂಡು ಮಹಾನಗರ ಪಾಲಿಕೆ ರಸ್ತೆ, ಗಡಿಯಾರ ಕಂಬ,ಕಾಳಿಕಾದೇವಿ ರಸ್ತೆ, ದುರ್ಗಾಂಬಿಕ ದೇವಿ ದೇವಸ್ಥಾನ ರಸ್ತೆ, ಹೊಂಡದ ವೃತ್ತ, ಅರುಣ ಚಿತ್ರಮಂದಿರ ವೃತ್ತ, ಎಂಸಿಸಿ ಎ ಬ್ಲಾಕ್, ವಿನೋಬನಗರ ಎರಡನೇ ಮುಖ್ಯರಸ್ತೆ, ವಿದ್ಯಾನಗರ, 60 ಅಡಿ ರಸ್ತೆ, ಡಾಂಗೆಪಾರ್ಕ್ ರಸ್ತೆ, ಶಿವಪ್ಪಯ್ಯ ವೃತ್ತ, ಜಯದೇವ ವೃತ್ತದ ಮೂಲಕ ಹೈಸ್ಕೂಲ್ ಮೈದಾನದಲ್ಲಿ ಮುಕ್ತಾಯಗೊಳ್ಳಲಿದೆ. ರ್‍ಯಾಲಿಗೆ ಜನಪ್ರತಿನಿಧಿಗಳು ಚಾಲನೆ ನೀಡಲಿದ್ದಾರೆ ಎಂದರು.

ದಿನಾಂಕ 5 ರಂದು ಬೆಳಿಗ್ಗೆ 10.30 ಕ್ಕೆ ಶಾಸಕ ಡಾ. ಶಾಮನೂರು ಶಿವಶಂಕರಪ್ಪ ಗಣೇಶ ವಿಸರ್ಜನಾ ಮೆರವಣಿಗೆಗೆ ಚಾಲನೆ ನೀಡಲಿದ್ದು, ಜಿಲ್ಲಾ ಉಸ್ತುವಾರಿ ಸಚಿವ ಎಸ್. ಎಸ್. ಮಲ್ಲಿಕಾರ್ಜುನ್, ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ್, ಮಾಜಿ ಸಂಸದ ಜಿ.ಎಂ. ಸಿದ್ದೇಶ್ವರ, ಮಾಜಿ ಸಚಿವ ಎಸ್.ಎ. ರವೀಂದ್ರನಾಥ್ ಸೇರಿದಂತೆ ಅನೇಕ ಗಣ್ಯರು ಪಾಲ್ಗೊಳ್ಳಲಿದ್ದಾರೆಂದರು.

ಹೈಸ್ಕೂಲ್ ಮೈದಾನದಿಂದ ಆರಂಭವಾಗುವ ಬೃಹತ್ ಶೋಭಾಯಾತ್ರೆ ಎವಿಕೆ ಕಾಲೇಜು ರಸ್ತೆ, ಅಂಬೇಡ್ಕರ್ ಸರ್ಕಲ್, ಜಯದೇವ ಸರ್ಕಲ್, ಲಾಯರ್ ರಸ್ತೆ, ಪಿ.ಬಿ. ರಸ್ತೆ ಮೂಲಕ ಸಂಗೊಳ್ಳಿ ರಾಯಣ್ಣ ವೃತ್ತದವರೆಗೆ ನಡೆಯಲಿದ್ದು, ನಂತರ ಜಿಲ್ಲಾಡಳಿತದ ಸಹಯೋಗದಲ್ಲಿ ಬಾತಿ ಕೆರೆಯಲ್ಲಿ ಗಣೇಶ ಮೂರ್ತಿ ವಿಸರ್ಜನೆ ಮಾಡಲಾಗುವುದು ಎಂದು ಹೇಳಿದರು.

**ಶೋಭಾಯಾತ್ರೆಯಲ್ಲಿ ಯಾವುದೇ ರಾಜಕಾರಣಿಗಳು, ಚಿತ್ರನಟರು, ವೈಯಕ್ತಿಕ ಬಾವುಟ ಹಾಗೂ ಬ್ಯಾನರ್ಸ್ ಪ್ರದರ್ಶನ ಮಾಡದಂತೆ ಸೂಚನೆ ನೀಡಲಾಗಿದೆ.**

**ಆಟೋ ಚಾಲಕರು, ಬಸ್ ಚಾಲಕರು, ಲಾರಿ ಚಾಲಕರು, ಅಂಗಡಿ ಮುಂಗಟ್ಟೆಗಳವರು ಸ್ವಪ್ರೇರಣೆಯಿಂದ ಬಂದ್ ಮಾಡಿ ಶೋಭಾಯಾತ್ರೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕು.**
**- ಜೊಳ್ಳಿ ಗುರು, ಅಧ್ಯಕ್ಷರು, ಸಾರ್ವಜನಿಕ ಹಿಂದೂ ಮಹಾ ಗಣಪತಿ ಟ್ರಸ್ಟ್**

ಶೋಭಾಯಾತ್ರೆಯಲ್ಲಿ ಚಂಡೆ ನಾದ, ಡ್ರಮ್‌ಸೆಟ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪ್ರಾಯೋಜಕತ್ವದಲ್ಲಿ 11 ಕಲಾ ತಂಡಗಳು, ಮಹಿಳೆಯರಿಗಾಗಿ ಪ್ರತ್ಯೇಕ ಸೇರಿದಂತೆ ಒಟ್ಟು ಐದು ಡಿಜೆಗಳನ್ನು ವ್ಯವಸ್ಥೆ ಮಾಡಲಾಗಿದೆ. ಸುಮಾರು ಐದರಿಂದ ಆರು ಲಕ್ಷ ಜನರು ಭಾಗವಹಿಸುವ ನಿರೀಕ್ಷೆ ಇದೆ. ವಿಸರ್ಜನಾ ಮೆರವಣಿಗೆ ಹಿನ್ನೆಲೆಯಲ್ಲಿ ನಗರದಲ್ಲಿ ಬಂಟಿಂಗ್ಸ್, ಬಾವುಟಗಳನ್ನು ಕಟ್ಟಲಾಗಿದೆ. ಬಸವಣ್ಣ, ವಾಲ್ಮೀಕಿ ಮಹರ್ಷಿ, ಕನಕದಾಸರು ಸೇರಿದಂತೆ 11 ಕ್ಕೂ ಅಧಿಕ ಟ್ಯಾಬ್ಲೋಗಳನ್ನು ಮಾಡಲಾಗುವುದು ಎಂದರು.

ಪತ್ರಿಕಾಗೋಷ್ಠಿಯಲ್ಲಿ ಮಾಗಿ ಜಯಪ್ರಕಾಶ್, ಕಮಲ್ ಗಿರೀಶ್, ಸಿದ್ದೇಶಪ್ಪ, ಗುರು, ಚಂದ್ರಣ್ಣ, ಪ್ರಕಾಶ್ ಐಗೂರು ಉಪಸ್ಥಿತರಿದ್ದರು.

## ಇಂದಿನಿಂದ ಗ್ರಾ.ಪಂ ನೌಕರರಿಂದ ಅನಿರ್ದಿಷ್ಟಾವಧಿ ಹೋರಾಟ

ದಾವಣಗೆರೆ, ಅ.3- ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಹಾಗೂ ಗ್ರಾ.ಪಂ ಕುಟುಂಬದ ಎಲ್ಲಾ ನೌಕರರ ಹಲವು ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ರಾಜ್ಯಾದ್ಯಂತ ಗ್ರಾ.ಪಂ ಸೇವೆ ಸ್ಥಗಿತಗೊಳಿಸಿ ನಾಳೆ ದಿನಾಂಕ 4ರಿಂದ ಅನಿರ್ದಿಷ್ಟಾವಧಿ ಧರಣಿ ಕೂರಲಿದ್ದೇವೆ ಎಂದು ಪಿಡಿಒ ಜಿಲ್ಲಾ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಸಂಗಮೇಶ್ ತಿಳಿಸಿದರು.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಗ್ರಾ.ಪಂನಲ್ಲಿ ಕೆಲಸ ಮಾಡುವ 11 ವೃಂದಗಳ ಸಂಘದ ಸಂಯುಕ್ತಾಶ್ರಯದಲ್ಲಿ ಅಂದು ಬೆಳಗ್ಗೆ 10.30ಕ್ಕೆ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಹೋರಾಟ ನಡೆಸಲಾಗುತ್ತಿದೆ ಎಂದು ಹೇಳಿದರು.

ರಾಜ್ಯದ ಎಲ್ಲಾ ಪಿಡಿಒ ಅಧಿಕಾರಿಗಳ ಹುದ್ದೆಯನ್ನು ಗೆಜೆಟೆಡ್ ಗ್ರೂಪ್ 'ಬಿ' ದರ್ಜೆಗೆ ಉನ್ನತೀಕರಿಸಬೇಕು. ಜೇಷ್ಠತಾ ಪಟ್ಟಿ ಹಾಗೂ ಬಡ್ತಿಯಲ್ಲಿನ ಸಮಸ್ಯೆಗಳನ್ನು ತುರ್ತಾಗಿ ಪರಿಹರಿಸಬೇಕೆಂದು ಒತ್ತಾಯಿಸಿದರು.

ಗ್ರೇಡ್-1 ಕಾರ್ಯದರ್ಶಿಗಳಿಗೆ, ಪಿಡಿಒ ಪದೋನ್ನತಿಯನ್ನು ಜಿಲ್ಲಾ ಮಟ್ಟದಲ್ಲಿ ಕೊಡುವುದು ಮತ್ತು ಸುಮಾರು ವರ್ಷಗಳಿಂದ ಕರ್ತವ್ಯ ನಿರ್ವಹಿಸುತ್ತಿರುವ ದ್ವಿತೀಯ ದರ್ಜೆ ಲೆಕ್ಕ ಸಹಾಯಕರನ್ನು, ಪ್ರಥಮ ದರ್ಜೆ ಲೆಕ್ಕ ಸಹಾಯಕರ ಹುದ್ದೆಗೆ ಬಡ್ತಿ ನೀಡಬೇಕು ಎಂದರು. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಜಿಲ್ಲಾ ಪಂಚಾಯತ್ ಹುದ್ದೆಗಳಲ್ಲಿ ಶೇ.33ರಷ್ಟು ಹುದ್ದೆಗಳನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ ಹಿರಿಯ ಅಧಿಕಾರಿಗಳಿಗೆ ಮೀಸಲಿಡಬೇಕು ಎಂದು ಆಗ್ರಹಿಸಿದರು.

ಈ ವೇಳೆ ವೀರೇಶ್, ಚೇತನ್, ಗಣೇಶ್, ಸಿದ್ದೇಶ್, ರಂಗಸ್ವಾಮಿ, ಚಿಕ್ಕಣ್ಣ, ಆನಂದ್, ಮರುಳಸಿದ್ದಪ್ಪ, ವಾಸುದೇವ ಮತ್ತಿತರರು ಸುದ್ದಿಗೋಷ್ಠಿಯಲ್ಲಿದ್ದರು.

## ಹರಿಹರ : ದುರ್ಗಾದೇವಿ ಮೂರ್ತಿ ಪ್ರತಿಷ್ಠಾಪನೆ



ಹರಿಹರ, ಅ. 3 - ನಗರದ ದಸರಾ ಉತ್ಸವ ಸಮಿತಿಯಿಂದ ನಾಮದೇವ ಶಿಂಪಿ ಕಲ್ಯಾಣ ಮಂಟಪದ ಸಭಾಂಗಣದಲ್ಲಿ ದುರ್ಗಾದೇವಿ ಮೂರ್ತಿ ಪ್ರತಿಷ್ಠಾಪನೆ ಮಾಡಿ ದೇವಿ ಆರಾಧನೆ ಹಾಗೂ ವಿವಿಧ ಪೂಜಾ ಕಾರ್ಯಗಳನ್ನು ನೆರವೇರಿಸಲಾಯಿತು.

ದುರ್ಗಾದೇವಿ ಮೂರ್ತಿ ದಾನಿಗಳಾದ ಮಾಜಿ ನಗರಸಭೆ ಅಧ್ಯಕ್ಷೆ ಸುಜಾತ ರೇವಣ ಸಿದ್ದಪ್ಪ ಅಮರಾವತಿ ಕುಟುಂಬದ ಸದಸ್ಯರು ವಿಶೇಷ ಪೂಜೆಯನ್ನು ಸಲ್ಲಿಸಿ ಭಕ್ತಿ ಸಮರ್ಪಿಸಿದರು. ಕಾರ್ಯಕ್ರಮದಲ್ಲಿ ದಸರಾ ಮಹೋತ್ಸವ ಸಮಿತಿಯ ಅಧ್ಯಕ್ಷ ಶಂಕರ್ ಖಟಾವ್ಕರ್, ಖಜಾಂಚಿ ಅಜಿತ್ ಸಾವಂತ್, ರಾಜು ಕಿರೋಜಿ, ಟಿ. ಜೆ. ಮುರುಗೇಶಪ್ಪ, ಹನುಮಂತ್ ರೆಡ್ಡಿ, ಅಮರಾವತಿ ರೇವಣ ಸಿದ್ದಪ್ಪ, ನಗರಸಭಾ ಉಪಾಧ್ಯಕ್ಷ ಜಂಬಣ್ಣ ಗುತ್ತೂರು, ಶಿವಪ್ರಕಾಶ್ ಶಾಸ್ತ್ರಿ, ಪ್ರಕಾಶ್ ಶ್ರೇಷ್ಠಿ, ಅಂಬಾಸ ಹಂಸಾಗರ್, ಕಂಚಿಕೇರಿ ಕರಿಬಸಪ್ಪ, ಚಿದಂಬರ ಜೋಯಿಸರು ಮತ್ತು ಲಕ್ಷ್ಮಿಕಾಂತ ಜೋಯಿಸರು, ಮಹಿಳೆ ಮಂಡಳಿಯ ನಾಗಮಣಿ ಶಾಸ್ತ್ರಿ, ರೂಪ ಶಶಿಕಾಂತ್ ಮಂಜುಳಾ, ಅಂಜನಾ ಖಟಾವ್ಕಾರ್, ಸಾವಿತ್ರಮ್ಮ, ಶಾರದಾ ಶಾಸ್ತ್ರಿ, ನಾಗರತ್ನ ಶಿಲ್ಪಾ ಇತರರು ಹಾಜರಿದ್ದರು.

## ಜನಪ್ರಿಯ ಕ್ರಿಕೆಟ್ ಕ್ಲಬ್ ವತಿಯಿಂದ ಪ್ರೀಮಿಯರ್ ಲೀಗ್



ದಾವಣಗೆರೆ, ಅ.3- ಇಲ್ಲಿನ ಜಿಲ್ಲಾ ಕ್ರೀಡಾಂಗಣದಲ್ಲಿ ನಗರದ ಜನಪ್ರಿಯ ಕ್ರಿಕೆಟ್ ಕ್ಲಬ್ ವತಿಯಿಂದ ಇದೇ ದಿನಾಂಕ 6ರವರೆಗೆ ನಡೆಯಲಿರುವ ಪ್ರೀಮಿಯರ್ ಲೀಗ್ - 2024 ಪಂದ್ಯಾವಳಿಗೆ ವಿದ್ಯುಕ್ತವಾಗಿ ಮೇಯರ್ ಕೆ. ಚಮನ್‌ಸಾಬ್ ಅವರು ಇಂದು ವಿದ್ಯುಕ್ತ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ದೂಡಾ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ, ದಾನಿಗಳಾದ ಶಿವಗಂಗಾ ಶ್ರೀನಿವಾಸ್, ಸುರೇಶ್, ಆರ್. ಕೆ. ಮೋಹನ್, ಜಿಲ್ಲಾ ಕ್ರೀಡಾಪಟುಗಳ ಸಾಂಸ್ಕೃತಿಕ ಸಂಘದ ಸಹ ಕಾರ್ಯದರ್ಶಿ ಜಯಪ್ರಕಾಶ್ ಗೌಡ ಮತ್ತಿತರರು ಇದ್ದರು.

## ದ್ವಿತೀಯ ಪಿಯುಸಿ ಸಿಇಟಿ, ನೀಟ್ ಉಚಿತ ತರಬೇತಿ : ನಗರದಲ್ಲಿ ಇಂದು ಉದ್ಘಾಟನೆ

ಜಿಲ್ಲಾ ಪಂಚಾಯತ್‌ನಿಂದ ಸರ್ಕಾರಿ ಕಾಲೇಜ್‌ನಲ್ಲಿ ದ್ವಿತೀಯ ಪಿ.ಯು.ಸಿ. ವಿಜ್ಞಾನ ವಿಭಾಗದಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಇಂದು ಮಧ್ಯಾಹ್ನ 1 ಗಂಟೆಗೆ ಕುವೆಂಪು ಕನ್ನಡ ಭವನದಲ್ಲಿ ಉಚಿತ ಸಿಇಟಿ ಮತ್ತು ನೀಟ್ ಪರೀಕ್ಷೆ ತರಬೇತಿ ನೀಡಲಾಗುತ್ತದೆ.

ಈ ಕಾರ್ಯಕ್ರಮಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್ ಮಲ್ಲಿಕಾರ್ಜುನ್, ಲೋಕಸಭಾ ಸದಸ್ಯರಾದ ಡಾ; ಪ್ರಭಾ ಮಲ್ಲಿಕಾರ್ಜುನ್ ಚಾಲನೆ ನೀಡುವರು ಎಂದು ಜಿಲ್ಲಾ ಪಂಚಾಯತ್ ಮುಖ್ಯಕಾರ್ಯನಿರ್ವಾಹಕ ಅಧಿಕಾರಿ ಸುರೇಶ್ ಬಿ.ಇಟ್ನಾಳ್ ತಿಳಿಸಿದ್ದಾರೆ.

## ಸ್ವೇಟ್ ಪಾರ್ಕ್ ಜಿಮ್‌ನಲ್ಲಿ ದಾಂಡಿಯ ನೈಟ್ : ಎಸ್ಸೆಸ್ ಸಂಭ್ರಮ



ದಾವಣಗೆರೆ, ಅ.3- ನವರಾತ್ರಿ ಪ್ರಯುಕ್ತ ನಗರದ ಸ್ವೇಟ್ ಪಾರ್ಕ್ ಜಿಮ್‌ನಲ್ಲಿ ದಾಂಡಿಯಾ ನೈಟ್ ಏರ್ಪಡಿಸಲಾಗಿತ್ತು.

ಕಾರ್ಯಕ್ರಮದ ಉದ್ಘಾಟನೆಯನ್ನು ಶಾಸಕ ಡಾ. ಶಾಮನೂರು ಶಿವಶಂಕರಪ್ಪ ನೆರವೇರಿಸಿದರು. ಈ ಸಂದರ್ಭದಲ್ಲಿ ದೂಡಾ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ, ಪಾಲಿಕೆ ಸದಸ್ಯ ಎ. ನಾಗರಾಜ್, ಮಾಜಿ ಮಹಾಪೌರರಾದ ಶ್ರೀಮತಿ ರೇಖಾ ನಾಗರಾಜ್, ಜಿಮ್ ಮಾಲೀಕ ರೂಪಿತ ನಾಗರಾಜ್, ರೀಮಾ ನಾಗರಾಜ್, ನಿರೀಕ್ಷಗೌಡ, ನಿಕಿಲ್, ಪವನ್, ಅಫೀಜ್, ರಾಜು ಭಂಡಾರಿ, ಖಗೇರ, ನೀಲಪ್ಪ, ವಿಶು ಮಾಸ್ಟರ್, ಲಕ್ಕೀ, ಚೈತ್ರ ಆರಾಧ್ಯ, ಶುಭ, ಸುನಿತಾಶೆಟ್ಟಿ, ಆಯೇಷಾ, ಧನ್ಯತಾ, ದೇವಿಕ, ಶೃತಿ ಇನ್ನು ಮತ್ತಿತರರು ಉಪಸ್ಥಿತರಿದ್ದರು

## ರಾಣೇಬೆನ್ನೂರು ತರಳಬಾಳು ಕಾಲೇಜಿನಲ್ಲಿ ಇಂದು

ಶ್ರೀ ತರಳಬಾಳು ಜಗದ್ಗುರು ತಾಂತ್ರಿಕ ಮಹಾವಿದ್ಯಾಲಯದಲ್ಲಿ ಇಂದು ಬೆಳಿಗ್ಗೆ 10.30 ಘಂಟೆಗೆ ಕಾಲೇಜ್ ಕ್ಯಾಂಪಸ್ ನಲ್ಲಿ 'ಗ್ರ್ಯಾಜುಯೇಷನ್ ಡೇ' ನಡೆಯಲಿದ್ದು, 2024ರ ಸಾಲಿನ ಬಿ.ಇ ಪದವೀಧರರಿಗೆ ಪದವಿ ಪತ್ರ ಪ್ರದಾನ ಮಾಡಲಾಗುವುದು.

**ಭದ್ರಾ ಜಲಾಶಯ**

ನೀರಿನ ಮಟ್ಟ : 186
ಒಳ ಹರಿವು : 7404 ಕ್ಯೂಸೆಕ್ಸ್
ಹೊರ ಹರಿವು : 4986 ಕ್ಯೂಸೆಕ್ಸ್
ಕಳೆದ ವರ್ಷ : 159 ಅಡಿ 3 ಇಂಚು

## ರೇಣುಕಾಚಾರ್ಯ ಹೇಳಿಕೆಗೆ ತಿರುಗೇಟು ನೀಡಿದ ಯಶವಂತರಾವ್

ದಾವಣಗೆರೆ, ಅ.3- ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ, ಪುತ್ರ ರಾಘವೇಂದ್ರ ಹಾಗೂ ರಾಷ್ಟ್ರನಾಯಕರ ವಿರುದ್ಧ ಆರೋಪ ಮಾಡಿಲ್ಲ ಎಂದು ಹೇಳುವುದಾದರೆ, ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ ಅವರು ನಗರ ದೇವತೆ ದುರ್ಗಾಂಬಿಕ ದೇವಸ್ಥಾನಕ್ಕೆ ಬಂದು ಗಂಟೆ ಹೊಡೆಯಲಿ ಎಂದು ಬಿಜೆಪಿ ಮಾಜಿ ಜಿಲ್ಲಾಧ್ಯಕ್ಷ ಯಶವಂತ ರಾವ್ ಜಾಧವ್ ಸವಾಲೆಸೆದರು.

ಇಂದಿಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಾಜಿ ಸಂಸದ ಜಿ.ಎಂ. ಸಿದ್ದೇಶ್ವರ ಅವರು ನಿಮ್ಮ ಹಾಗೆ ಹಾದಿಬೀದಿಯಲ್ಲಿ ಮಾತನಾಡಿಲ್ಲ. ರಾಷ್ಟ್ರನಾಯಕರಿಗೆ ನಡೆದಿದ್ದನ್ನೆಲ್ಲಾ ನೇರವಾಗಿ ಹೇಳಿ ಬಂದಿದ್ದಾರೆ. ಹಾದಿ ಬೀದಿಯಲ್ಲಿ ಮಾತನಾಡಿದ್ದಕ್ಕೇ ನೋಟೀಸ್ ಬಂದಿದೆಯೇ ವಿನಃ ನಮಗಲ್ಲ ಎಂದು ರೇಣುಕಚಾರ್ಯ ವಿರುದ್ಧ ಹರಿಹಾಯ್ದರು.

ಲೋಕಸಭಾ ಚುನಾವಣೆ ಸಂದರ್ಭದಲ್ಲಿ ನಾಲ್ಕು ಬಾರಿ ಎಸ್.ಎಸ್. ಮಲ್ಲಿಕಾರ್ಜುನ್ ಅವರ ಮನೆ ಬಾಗಿಲಿಗೆ ಯಾರು ಹೋಗಿದ್ದಾರೆ ಎಂಬುದು ಜನರಿಗೆ ತಿಳಿದಿದೆ. ಇನ್ನಾದರೂ ನಾಟಕವಾಡುವುದನ್ನು ನಿಲ್ಲಿಸಿ ಎಂದು ತಿರುಗೇಟು ನೀಡಿದರು.

ನಾನು ಬಿ.ಎಸ್. ಯಡಿಯೂರಪ್ಪ ಅವರ ಮಾನಸ ಪುತ್ರ ಎನ್ನುವ ರೇಣುಕಾಚಾರ್ಯ, ಈ ಹಿಂದೆ ಯಡಿಯೂರಪ್ಪ ಹಾಗೂ ಅವರ ಪುತ್ರರ ವಿರುದ್ಧವೇ ಹೇಳಿಕೆ ನೀಡಿದ್ದರು. ಬಿ.ಎಲ್. ಸಂತೋಷ್, ನಳಿನ್ ಕುಮಾರ್ ಕಟೀಲ್ ಸೇರಿದಂತೆ ರಾಜ್ಯ, ರಾಷ್ಟ್ರ ನಾಯಕರ ವಿರುದ್ಧ ಮಾತನಾಡಿದ್ದರು. ಅವರಿಗೆ ಇನ್ನೆಲ್ಲಿ ನೈತಿಕತೆ ಇದೆಯೇ? ಎಂದು ಪ್ರಶ್ನಿಸಿದರು.

ಜಿ.ಎಂ. ಸಿದ್ದೇಶ್ವರರ ವಿರುದ್ಧ ಮಾತನಾಡುವ ಮಾಜಿ ಸಚಿವ ಎಸ್.ಎ. ರವೀಂದ್ರನಾಥ್, ಶಿವಯೋಗಿಸ್ವಾಮಿ ಎರಡು ವರ್ಷ ಪಕ್ಷದ ಕಚೇರಿಗೇ ಬರಲಿಲ್ಲ. ಯಡಿಯೂರಪ್ಪ ವಿರುದ್ಧವೇ ರಾಯಣ್ಣ ಬ್ರಿಗೇಡ್ ಕಟ್ಟಲು ಮುಂದಾದವರು ನೀವು. ನಾವು ಸ್ಥಾನ ಸಿಕ್ಕಿದರೂ ಸಿಗದಿದ್ದರೂ ಪಕ್ಷದ ನಾಯಕರ ಬಗ್ಗೆ ನಿಮ್ಮಂತೆ ಹೇಳಿಕೆ ನೀಡಿಲ್ಲ ಎಂದು ಕಿಡಿಕಾರಿದರು.

ಶಾಸಕ ಬಿ.ಪಿ. ಹರೀಶ್ ಮಾತನಾಡಿ, ಮುಡಾ ಹಗರಣಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರು ಗೌರವಯುತವಾಗಿ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಬೇಕು. ಹಿಂದೆ ಯಡಿಯೂರಪ್ಪ ವಿರುದ್ಧ ಆರೋಪ ಬಂದಾಗ ಸಿದ್ದರಾಮಯ್ಯ ಅವರು ರಾಜೀನಾಮೆಗೆ ಒತ್ತಾಯಿಸಿದ್ದರು. ಬಿಎಸ್‌ವೈ ನೈತಿಕ ಹೊಣೆ ಹೊತ್ತು ರಾಜೀನಾಮೆ ನೀಡಿದ್ದರು. ಆದರೆ ಸಿದ್ಧರಾಮಯ್ಯ ಅವರು ರಾಜೀನಾಮೆ ವಿಚಾರದಲ್ಲಿ ಬಂಡತನ ತೋರುತ್ತಿದ್ದಾರೆಂದು ದೂರಿದರು.

ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದು 17 ತಿಂಗಳು ಕಳೆದರೂ ಬಡವರು, ಹಿಂದುಳಿದವರು, ವಿದ್ಯಾರ್ಥಿಗಳಿಗೆ ವಿವಿಧ ನಿಗಮ, ಮಂಡಳಿಗಳಿಂದ ಸೌಲಭ್ಯಕ್ಕೆ ನಯಾಪೈಸೆಯನ್ನೂ ಸಹ ಬಿಡುಗಡೆ ಮಾಡಿಲ್ಲ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಬಿಜೆಪಿ ಮುಖಂಡರಾದ ವೀರೇಶ್ ಹನಗವಾಡಿ, ಬಿ.ಎಸ್. ಜಗದೀಶ್, ಎ.ವೈ. ಪ್ರಕಾಶ್, ಅಣಬೇರು ಜೀವನಮೂರ್ತಿ, ಹನುಮಂತಪ್ಪ, ಯಶೋಧ ಹೆಗ್ಗಪ್ಪ, ಎಂ.ಆರ್. ಮಹೇಶ್ ಉಪಸ್ಥಿತರಿದ್ದರು.

## ಎಡಿಜಿಪಿ ಚಂದ್ರಶೇಖರ್ ವಿರುದ್ಧ ನಗರದಲ್ಲಿ ಜೆಡಿಎಸ್ ಪ್ರತಿಭಟನೆ




ದಾವಣಗೆರೆ, ಅ.3- ಕೇಂದ್ರ ಸಚಿವ ಹೆಚ್.ಡಿ. ಕುಮಾರ ಸ್ವಾಮಿ ಅವರ ಬಗ್ಗೆ ಕೀಳು ಮಟ್ಟದ ಹೇಳಿಕೆ ನೀಡಿ ಅವಮಾನಿಸಿದ ಎಡಿಜಿಪಿ ಚಂದ್ರಶೇಖರ್ ಅವರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿ ಜೆಡಿಎಸ್ ಜಿಲ್ಲಾ ಘಟಕವು ಗುರುವಾರ ಪ್ರತಿಭಟನೆ ನಡೆಸಿತು.

ಇಲ್ಲಿನ ಪಿ.ಬಿ ರಸ್ತೆಯ ಬೀರಲಿಂಗೇಶ್ವರ ದೇವಸ್ಥಾನ ಬಳಿ ಜಮಾಯಿಸಿದ ಜೆಡಿಎಸ್ ಕಾರ್ಯ ಕರ್ತರು, ಪ್ರತಿಭಟನಾ ಮೆರವಣಿಗೆ ಮೂಲಕ ಎಸಿ ಕಚೇರಿಗೆ ತೆರಳಿ ಉಪ ವಿಭಾಗಾಧಿಕಾರಿಗಳ ಮೂಲಕ ರಾಜ್ಯಪಾಲರಿಗೆ ಮನವಿ ಸಲ್ಲಿಸಿದರು.

ಪಕ್ಷದ ಕಾರ್ಯಕರ್ತರು ಹಾಗೂ ಮುಖಂಡರು, ಎಡಿಜಿಪಿ ಚಂದ್ರಶೇಖರ್ ಹಾಗೂ ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ಹೊರಹಾಕಿದರು.

ಈ ವೇಳೆ ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್ ಮಾತನಾಡಿ, ಐಎಎಸ್, ಐಪಿಎಸ್ ಹಾಗೂ ರಾಜ್ಯದ ಯಾವುದೇ ಅಧಿಕಾರಿಗಳಾಗಲೀ ರಾಜಕೀಯ ವ್ಯಕ್ತಿ ಮತ್ತು ಜನಸಾಮಾನ್ಯರಂತೆ ಮಾತನಾಡುವ ಹಕ್ಕು ಅವರಿಗಿಲ್ಲ. ಅವರಿಗೇ ಆದಂತಹ ನೀತಿ ಮತ್ತು ಚೌಕಟ್ಟು ಇದ್ದು, ಅದನ್ನ ಮೀರಿ ಕೆಲಸ ಮಾಡಿದರೇ ಸರ್ಕಾರ ಅವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಚುನಾಯಿತ ಪ್ರತಿನಿಧಿಗಳ ವಿರುದ್ಧ ಕ್ರಮ ಕೈಗೊಳ್ಳಲು ಕೇಡರ್ ಪ್ರಾಧಿಕಾರದ ಅನುಮತಿ ಪಡೆಯಬೇಕು. ಆದರೆ ಎಡಿಜಿಪಿ ಚಂದ್ರಶೇಖರ್ ಅವರು, ಹೆಚ್.ಡಿ. ಕುಮಾರ ಸ್ವಾಮಿ ಅವರ ವಿರುದ್ಧ ಅವಹೇಳನಕಾರಿಯಾಗಿ ಪದ ಬಳಕೆ ಮಾಡಿದ್ದಲ್ಲದೇ, ಪತ್ರ ಕಳುಹಿಸಿರುವುದನ್ನು ಗಮನಿಸಿದರೆ ಅವರು ಅಧಿಕಾರಿ ಆಗುವುದಕ್ಕೆ ಲಾಯಕ್ಕಿಲ್ಲ ಎಂದು ಟೀಕಿಸಿದರು.

ಎಡಿಜಿಪಿ ಚಂದ್ರಶೇಖರ್ ಅನ್ಯ ರಾಜ್ಯದವರು, ಇಲ್ಲಿ ಅಪ್ರಾಮಾಣಿಕತೆಯಿಂದ ಕಾರ್ಯ ನಿರ್ವಹಿಸುವ ಮೂಲಕ ರಾಜ್ಯದ ಜನರ ಕೆಂಗಣ್ಣಿಗೆ ತುತ್ತಾಗಿದ್ದಾರೆ ಎಂದು ಆರೋಪಿಸಿದರು.

ರಾಜ್ಯಪಾಲರು ಕೂಡಲೇ ನಮ್ಮ ಮನವಿಗೆ ಸ್ಪಂದಿಸಿ, ಎಡಿಜಿಪಿ ಚಂದ್ರಶೇಖರ್ ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವ ಜತೆಗೆ ಅವರನ್ನು ಅವರ ತವರು ರಾಜ್ಯವಾದ ಹಿಮಾಚಲ ಪ್ರದೇಶಕ್ಕೆ ಸ್ಥಳಾಂತರಿಸಬೇಕು ಎಂದು ಮನವಿ ಮಾಡಿದರು.

ಈ ವೇಳೆ ಜಿಲ್ಲಾಧ್ಯಕ್ಷ ಚಿದಾನಂದ, ಹರಿಹರ ನಗರಸಭಾ ಅಧ್ಯಕ್ಷರಾದ ಕವಿತಾ ಮಾರುತಿ ಬೇಡರ್, ಜಂಬಣ್ಣ, ಅಡಕಿ ಕುಮಾರ್, ಲತಾ ಕೊಟ್ರೇಶ್, ಮಮತಾ, ಜೆ. ಅಮಾನುಲ್ಲಾ, ದುಗ್ಗೇಶ್, ಧನ್ಯ ಕುಮಾರ್, ಬಂಡೇರ್ ತಿಮ್ಮಣ್ಣ, ಬಾಬಣ್ಣ ಮತ್ತಿತರರಿದ್ದರು.


**REQUIRED**

MARKETING / SALES PERSON - 04
SALES PERSON (Counter) - 02
OFFICE INCHARGE - 01
DELIVERY BOYS - 03

Degree holders and experinece preferred.
Contact with relevant documents.

**VISHWAS SCIENTIFIC Co.**
491/3B, Naganagowdru Complex, Hadadi Road, Davanagere - 2
**Mob : 75800 75844**
Timings : 11 AM to 2 PM, 6 PM to 7.30 PM

**ROYAL AUTOMOBILES**
ROYAL ENFIELD
**ಬೇಕಾಗಿದ್ದಾರೆ**

ಹರಪನಹಳ್ಳಿ ಹಾಗೂ ಹೊನ್ನಾಳಿ ಶೋ ರೂಂನಲ್ಲಿ ಕಾರ್ಯ ನಿರ್ವಹಿಸಲು ಯುವಕರು ಹಾಗೂ ಯುವತಿಯರಿಗೆ ಈ ಕೆಳಗಿನ ಹುದ್ದೆಗಳಿಗೆ ಅರ್ಜಿ ಕರೆಯಲಾಗಿದೆ.

| | | |
|---|---|---|
| Sales Executives | SSLC, Any Degree Qualification | 03 |
| Service Adviser | B.E. Diploma in Mechaninc | 02 |
| Work Manager | B.E., Diploma in Mechanic | 02 |
| Telecaller | PUC, Any Degree, ITI, Fitter | 01 |
| Mechanic | ITI, Fitter, Mechanic | 04 |
| Driver | Any Qualification (License Mandatory) | 01 |

**ನೇರ ಸಂದರ್ಶನ**
ಬೆಳಿಗ್ಗೆ 10 ರಿಂದ 5 ಗಂಟೆಯ ಒಳಗೆ
Kusagur Building, Shivakumraswamy Layout, 2nd Stage, Hadadi Road, Davangere.
email : royalenfield.davangeredealer@gmail.com
**Cell : 97405 91635**

## ಹರಿಹರದಲ್ಲಿ ಇಂದು ಸಾಧು ವೀರಶೈವ ಸಮಾಜದ ಸಭೆ

ಹರಿಹರದ ಶಿವಮೊಗ್ಗ ರಸ್ತೆಯಲ್ಲಿರುವ ತರಳಬಾಳು ಶಾಲೆಯಲ್ಲಿ ಇಂದು ಬೆಳಗ್ಗೆ 11-30 ಕ್ಕೆ ಹರಿಹರ ತಾ. ಸಾಧು ವೀರಶೈವ ಸಮಾಜದ ಸಭೆಯನ್ನು ಸಮಾಜದ ಅಧ್ಯಕ್ಷರಾದ ಗೌಡ್ರ ಮಹದೇವಪ್ಪ ಅವರ ಅಧ್ಯಕ್ಷತೆಯಲ್ಲಿ ಕರೆಯಲಾಗಿದೆ ಎಂದು ಸಮಾಜದ ಕಾರ್ಯದರ್ಶಿ ಇಟಗಿ ಶಿವಣ್ಣ ತಿಳಿಸಿದ್ದಾರೆ.




## ಸಿ.ಎಸ್. ಸುಬ್ರಮಣ್ಯ ಶ್ರೇಷ್ಠಿ ನಿಧನ



ಆರ್.ಎಸ್. ಟ್ರೇಡರ್ಸ್, ಎಂ.ಜಿ. ರಸ್ತೆ, ದಾವಣಗೆರೆ.
ಎಸ್. ನಾಗೇಂದ್ರ ಪ್ರಸಾದ್, ಎಸ್. ರವಿಕುಮಾರ್
ಇವರ ತಂದೆಯವರಾದ
**ಸಿ.ಎಸ್. ಸುಬ್ರಹ್ಮಣ್ಯ ಶ್ರೇಷ್ಠಿ**
ಜನನ : 30.8.1939 ಮರಣ : 3.10.2024

ಇವರು ದಿನಾಂಕ : 03.10.2024ರ ಗುರುವಾರ ಮಧ್ಯಾಹ್ನ 2.05ಕ್ಕೆ ನಿಧನರಾಗಿದ್ದಾರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರ ಅಂತ್ಯಸಂಸ್ಕಾರವನ್ನು 4.10.2024ರ ಶುಕ್ರವಾರ ಮಧ್ಯಾಹ್ನ 12.00ಕ್ಕೆ ಆರ್.ಹೆಚ್. ಬೃಂದಾವನದಲ್ಲಿ ನೆರವೇರಿಸಲಾಗುವುದು.

ಇಂತಿ ದುಃಖತಪ್ತ ಕುಟುಂಬ ವರ್ಗ
ಫೋನ್ : 98808 08231, 98454 11504

## ಹನ್ನೆರಡನೇ ವರ್ಷದ ಪುಣ್ಯಸ್ಮರಣೆ



**ದಿ|| ಎ.ಓ. ಅಂತೋಣಿ**

ನೀವು ನಮ್ಮನ್ನಗಲಿ ಹನ್ನೆರಡು ವರ್ಷಗಳಾದವು
ಸದಾ ನಿಮ್ಮ ಸ್ಮರಣೆಯಲ್ಲಿರುವ...
ಪತ್ನಿ, ಮಕ್ಕಳು, ಸೊಸೆಯಂದಿರು ಮತ್ತು ಮೊಮ್ಮಕ್ಕಳು




## ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಆಂಜನೇಯ ಬಡಾವಣೆ, ಮೆಡಿಕಲ್ ಬಾಯ್ಸ್ ಹಾಸ್ಟೆಲ್ ರಸ್ತೆ, ಗುಂಡಿ ಸ್ಕೂಲ್, ವೆಂಕಟೇಶ್ವರ ದೇವಸ್ಥಾನ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ ವಿದ್ಯುತ್ ವ್ಯತ್ಯಯವಾಗ ಲಿದೆ. ಸಾರ್ವಜನಿಕರು ಸಹಕರಿಸಲು ಬೆಸ್ಕಾಂ ವಿನಂತಿಸಿದೆ.

## ಸಾಧು ವೀರಶೈವ ಸಮಾಜ, ಹರಿಹರ ತಾಲ್ಲೂಕು

**ವಿಷಯ : ಶ್ರದ್ಧಾಂಜಲಿ ಕಾರ್ಯಕ್ರಮದ ಲೆಕ್ಕ ಪತ್ರದ ಮಾಹಿತಿ ನೀಡುವ ಬಗ್ಗೆ**

ಈ ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಸಮಾಜ ಬಾಂಧವರಿಗೆ ತಿಳಿಸುವುದೇನೆಂದರೆ, ದಿನಾಂಕ : 14.09.2024 ರಂದು ಲಿಂಗೈಕ್ಯ ಶ್ರೀ ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳವರ ಶ್ರದ್ಧಾಂಜಲಿ ಕಾರ್ಯಕ್ರಮಕ್ಕೆ ಭಕ್ತಿ ಸಮರ್ಪಣೆ ಮಾಡಿದ ಬಗ್ಗೆ ಲೆಕ್ಕ ಪತ್ರ ಪರಿಶೀಲನೆಗಾಗಿ ದಿನಾಂಕ : 04.10.2024ರ ಶುಕ್ರವಾರ ಬೆಳಿಗ್ಗೆ 11.30 ಗಂಟೆಗೆ ಸಮಾಜದ ಅಧ್ಯಕ್ಷರಾದ ಗೌಡ್ರ ಮಹದೇವಪ್ಪ ಇವರ ಅಧ್ಯಕ್ಷತೆಯಲ್ಲಿ ಸಭೆ ಕರೆಯಲಾಗಿದೆ. ಆದ್ದರಿಂದ ಸಮಾಜದ ಸರ್ವ ಸದಸ್ಯರು ಹಾಗೂ ಸಮಾಜದ ಎಲ್ಲಾ ಬಾಂಧವರು ಸಕಾಲಕ್ಕೆ ತಪ್ಪದೇ ಈ ಸಭೆಯಲ್ಲಿ ಭಾಗವಹಿಸಿ, ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕಾಗಿ ವಿನಂತಿ.

ಸ್ಥಳ : ಶ್ರೀ ತರಳಬಾಳು ಜಗದ್ಗುರು ಪ್ರಾಥಮಿಕ ಮತ್ತು ಪ್ರೌಢಶಾಲೆ, ಮಹಜೇನಹಳ್ಳಿ, ಹರಿಹರ.

ಇಟಗಿ ಶಿವಣ್ಣ ನಿಟ್ಟೂರು, ಕಾರ್ಯದರ್ಶಿ, (94489 66068)







KA/SK/DVG-028/2024-2026. O/P @ B.V. Nagar P.O. JANATHAVANI - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas